# ಕಂಪು ಕಂನಡಿಗರ ಪೆಂಪು

ಮಲ್ಲಿಗೆ ಕನ್ನಡ ಸಂಘದ ಇ-ಪತ್ರಿಕೆ

ಸ್ವಾತಂತ್ರ್ಯ ಸಂಚಿಕೆ

ಸಂಪುಟ 2 ಸಂಚಿಕೆ 4

Newsletter of MKANT
Swatantrya 2012

www.mallige.org

ಈ ಸಂಚಿಕೆಯಲ್ಲಿ

| | |
|---|---|
| ಯುಗಾದಿ ವರದಿ | 1 |
| ಅಧ್ಯಕ್ಷರ ಸಂದೇಶ | 3 |
| ಸಂಗೀತ ಸಂಜೆ | 4 |
| ಮಹಿಳಾ ಮಧ್ಯಾಹ್ನ | 5 |
| ಕೈಯಲ್ಲಾಗುತ್ತಾ? | 6 |
| ಕಂಗ್ಲೀಷ್ ಕವನ | 8 |
| ಸಂಪಾದಕೀಯ | 8 |
| ಬೃಂದಾವನ | 9 |
| ಪಾದರಕ್ಷಾ ಪ್ರಸಂಗ | 10 |
| ಕುಬ್ಜ ಮರಗಳು | 11 |
| ಪಾಕಂಪಪ್ಪು | 12 |
| ಹಾಲುಂಡ ತವರು | 15 |
| ಶ್ರದ್ಧಾಂಜಲಿ | 16 |

## ಮಲ್ಲಿಗೆ ಕನ್ನಡ ಸಂಘ - ಯುಗಾದಿ 2012 ವರದಿ

- ಸಂಧ್ಯಾ ಹೊನ್ನವಳ್ಳಿ



**ಮಾ**ರ್ಚ್ ೩೧ರಂದು ಮನೆಯಲ್ಲಿ ರಾಮನವಮಿಯ ಮಜ್ಜಿಗೆ, ಕೋಸಂಬ್ರಿ ಆಯಿತು. ಮಧ್ಯಾಹ್ನದ ಕಾಫಿ, ಟೀ, ಬೋಂಡ, ಬಜ್ಜಿ ಹೊತ್ತಿಗೆ ಲೂಯಿಸ್‌ವಿಲ್ಲಿನ, ಎಮ್ ಸೀ ಎಲ್ ಗ್ರಾಂಡ್ ಥಿಯೇಟರ್ನಲ್ಲಿ ಜನರೋ ಜನರು! ಯಾರೂ ಅಂತೀರಾ? ನಮ್ಮ ಡ್ಯಾಲಸ್ಸಿನ ಕನ್ನಡಿಗರು. ಯಾಕೇ ಅಂತೀರಾ? ನಮ್ಮ ಮಲ್ಲಿಗೆ ಕನ್ನಡ ಸಂಘದ ಯುಗಾದಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು....ಅಬ್ಬಬ್ಬಾ, ಏನು ಸಂಭ್ರಮ, ಏನು ಸಡಗರ! ಸರಿ, ತಿಂಡಿ, ಕಾಫ಼ೆ ಆಗಿ, ಎಲ್ಲರೂ ಸಭಾಂಗಣದಲ್ಲಿ ಆಸೀನರಾಗಲು ಶುರು.

ಸಂಪ್ರದಾಯದಂತೆ ಪ್ರಾರ್ಥನೆಯಿಂದ ಕಾರ್ಯಕ್ರಮ ಆರಂಭ. ೧೦ ವರ್ಷದ ಪುಟ್ಟ ಸಹನ, ದಿಟ್ಟವಾಗಿ ನಿಂತು, ಎಲ್ಲರಿಗೂ ಯುಗಾದಿಯ ಶುಭಾಶಯಗಳನ್ನು ಕೋರಿ, ತನ್ನ ಸುಶ್ರಾವ್ಯ ಕಂಠದಲ್ಲಿ"ಶ್ರೀ ಗಣೇಶಾಯ ಧೀಮಹಿ" ಎಂದು ಹಾಡುತ್ತಾ ಎಲ್ಲರನ್ನೂ ತನ್ನ ಗಾನ ಮಾಧುರ್ಯದಲ್ಲಿ ತೇಲಿಸಿಬಿಟ್ಟಳು. ಹಾಡಿನ ಸಮಕ್ಕೂ ವೇದಿಕೆಯ ಪರದೆ ಮೇಲೆ ಕಂಡ ವೈವಿಧ್ಯಮಯ ಗಣಪತಿಗಳ ದರ್ಶನ ಅದ್ಭುತವಾಗಿತ್ತು. ದೃಶ್ಯ, ಶ್ರಾವ್ಯ ಎರಡೂ "ಸೂಪರ್".



ಪೂರ್ಣಿಮ ಸುಬ್ರಹ್ಮಣ್ಯ ಅವರ ನೇತೃತ್ವದಲ್ಲಿ ಪುಟಾಣಿ ಮಕ್ಕಳು ಹಾಡಿದ ನಾಮರಾಮಾಯಣ ಅತ್ಯಂತ ಸ್ಪಷ್ಟವಾಗಿದ್ದು, ಪ್ರದರ್ಶಿಸಿದ ಕೆಲವು ದೃಶ್ಯಗಳು ಸುಂದರವಾಗಿ ಮೂಡಿ ಬಂದವು.

"ಆಹಾ ನನ್ನ ಮದ್ವೆಯಂತೆ" ಎಂದು ಕುಲುಕುತ್ತಾ, "ಬಿಂಕದ ಸಿಂಗಾರಿ" ಎಂದು ಬಳುಕುತ್ತಾ, ಹೆಜ್ಜೆ ಹಾಕಿದ ಮುದ್ದು ಮಕ್ಕಳು, ಎಲ್ಲರಿಂದ ಚಪ್ಪಾಳೇ, ಶಿಳ್ಳೆಗಳನ್ನು ಗಳಿಸಿದರು. ಇವರನ್ನು ಇಷ್ಟು ಚೆನ್ನಾಗಿ ತಯಾರಿ ಮಾಡಿದವರು ಸಹನ ಸುನಿಲ್.

ಬಣ್ಣ ಬಣ್ಣದ ಮಿನುಗುವ ರಂಗವಲ್ಲಿಗಳನ್ನು ಪ್ರದರ್ಶಿಸುತ್ತಾ, ಮಕ್ಕಳು ಜೀ.ಪೀ.ರಾಜರತ್ನಂ ಅವರ "ರಂಗವಲ್ಲಿ ಇಕ್ಕುತಾರೆ" ಹಾಡಿಗೆ ನರ್ತಿಸಿದ್ದು, ಕಣ್ಣಿಗೆ ಹಬ್ಬವಾಗಿತ್ತು. ಸೂತ್ರಧಾರರು ವೀಣಾ ಅರವಿಂದ್.

ಸುಶ್ಮಾ ರಂಗಸ್ವಾಮಿಯವರ ನಿರ್ದೇಶನದಲ್ಲಿ ಮೂಡಿ ಬಂದ "ನಾನು ಕೋಳಿಕೆ ರಂಗ" ಬಹಳ ಲಯ ಬದ್ಧವಾಗಿದ್ದು, ಆಕರ್ಷಕ ಉಡಿಗೆ ತೊಡಿಗೆಗಳಿಂದ ಕೂಡಿದ್ದು ಮೋಹಕವಾಗಿ ಮೂಡಿ ಬಂತು.





ಬಾಲದತ್ತ ಕನ್ನಡ ಶಾಲೆಯ ಮಕ್ಕಳು ಪ್ರದರ್ಶಿಸಿದ "ಕನ್ನಡ ಕಣ್ಮಣಿಗಳು" ರೂಪಕ ನವೀನ ಮಾದರಿಯದಾಗಿತ್ತು. ಎಂದಿಗೂ ಮರೆಯಲಾಗದ ಕರ್ನಾಟಕದ ಕೆಲವು ಗಣ್ಯ ವ್ಯಕ್ತಿಗಳನ್ನು, ಮಕ್ಕಳ ರೂಪದಲ್ಲಿ ನಮ್ಮ ಮುಂದೆ ನಿಲ್ಲಿಸಿದವರು, ಚೈತ್ರ ಶ್ರೀಧರ್.

ನಂದಿನಿ ಕಂಬಿಯವರ "ಬಾಲಕರ ತಂಡ" ಹಾಡಿದ ಸುಪ್ರಸಿದ್ಧ ಭಾವಗೀತೆಗಳು,  "ಸಂಜೆ ಹಣ್ಣಾಗಿ" ಮತ್ತು "ತರವಲ್ಲ ತೆಗಿ ನಿನ್ನ ತಂಬೂರಿ". ಮಕ್ಕಳ ಯತ್ನ ಶ್ಲಾಘನೀಯ!

ರೂಪ ಗೌಡರ ನಿರ್ದೇಶನದಲ್ಲಿ, ಮಕ್ಕಳು, "ಬೆಳ್ಳಿ ಮೂಡಿತೋ ಕೋಳಿ ಕೂಗಿತೋ" ಎಂದು ಕುಣಿದಿದ್ದು, ಕೇಳಲು, ನೋಡಲು, ಎರಡೂ ಚೆನ್ನಾಗಿತ್ತು.



ಎಲ್ಲರಿಗೂ ಸ್ವಾತಂತ್ರ್ಯೋತ್ಸವದ ಶುಭಾಶಯಗಳು



"ನಮ್ಮ ತಿಪ್ಪಾರಳ್ಳಿ ಬಲು ದೂರ..." ಹಾಡು ಮರೆಯಲಾಗುತ್ತದೆಯೇ? ನಾಗಶ್ರೀ ಶ್ರೀನಿವಾಸ್ ಅವರ ತಯಾರಿಯಲ್ಲಿ ಕೇಳಲು ಸಿಕ್ಕ ಕೈಲಾಸಂ ಗೀತೆಗಳು ಕನ್ನಡ ಸಾಹಿತ್ಯ ಪ್ರಿಯರಿಗೆಲ್ಲಾ ಮೃಷ್ಟಾನ್ನದಂತಿತ್ತು.

ಹೆಂಗಳೆಯರು ತಾವು ಉಟ್ಟ ಸೀರೆಗಳ ಬಗ್ಗೆ ಮಾತಾಡಿಕೊಳ್ಳುವುದು ಸಹಜ. ಆದರೆ ಕೆಲವು ಉತ್ಸಾಹೀ ಮಹಿಳೆಯರು, ಬಣ್ಣ ಬಣ್ಣದ ಸೀರೆಗಳನ್ನು ಅಳವಡಿಸಿಕೊಂಡು, ಥಳಕು ಬಳುಕಿನಿಂದ ವೇದಿಕೆಯ ಮೇಲೆ ನರ್ತಿಸಿದ್ದು ಮನೋಹರವಾಗಿತ್ತು. ಹಿನ್ನಲೆ ಗಾಯನಕ್ಕಾಗಿ ಆರಿಸಿಕೊಂಡಿದ್ದ "ಆಡಿಯೋ" ಏ ಒನ್!



ರಾಜಶ್ರೀ ರಮೇಶ್ ಅವರ ಸಮಿತಿ ಎಲ್ಲರಿಗೂ ವಿದಾಯ ಹೇಳಿ, ಕಳೆದ ೨ ವರ್ಶಗಳ ಬೆಂಬಲಕ್ಕೆ ಧನ್ಯವಾದಗಳನ್ನು ಅರ್ಪಿಸಿದರೆ, ಜಯಶ್ರೀ ಮೂರ್ತಿಯವರ ನೇತೃತ್ವದ ಹೊಸ ಸಮಿತಿ ಎಲ್ಲರ ಮುಂದೆ ತಮ್ಮ ಪರಿಚಯ ಮಾಡಿಕೊಂಡು, ತಾವು ಹಮ್ಮಿಕೊಂಡಿರುವ ಯೋಜನೆಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು. ಮುಂಚಿನ ಹಾಗೂ ಮುಂದಿನ ಸಮಿತಿಯವರಿಗೆಲ್ಲಾ, ನಮ್ಮೆಲ್ಲರ ಅನೇಕ ಅಭಿನಂದನೆಗಳು. ತಮ್ಮ ಉತ್ಸಾಹ ಪೂರಿತ ಪ್ರಯತ್ನಗಳಿಗಾಗಿ ಹಾಗೂ ಕನ್ನಡದ ಏಳಿಗೆಗೆ ಶ್ರಮಿಸುತ್ತಿರುವುದಕ್ಕಾಗಿ! ನಂತರ ವಂದನಾರ್ಪಣೆ.



ಅಂದಿನ ಕೊನೆಯ ಕಾರ್ಯಕ್ರಮ, ೮ ರಿಂದ ೧೫ ವರ್ಷದ ಮಕ್ಕಳ ಅಭಿನಯದ, ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಜೀವನದ ಮೇಲೆ ಆಧಾರಿತವಾದ, "ರಾಯರ ಕರುಣೆ" ನಾಟಕ. ಎಲ್ಲಾ ಪಾತ್ರಧಾರಿಗಳ ಸ್ವಚ್ಛ ಕನ್ನಡ ಉಚ್ಚಾರಣೆ, ಅವರ ಹಾವ ಭಾವ, ಅಭಿನಯ, ಎಲ್ಲವೂ ಮನೋಜ್ಞವಾಗಿತ್ತು. ವೇದಿಕೆಯ ಸಜ್ಜು, ಅಳವಡಿಸಿದ್ದ ಬೃಂದಾವನ, ಪೀಠೋಪಕರಣಗಳು, ಇವೆಲ್ಲಕ್ಕೂ ಮೀಸಲಿಟ್ಟ ಸಮಯ, ಪಟ್ಟ ಶ್ರಮ ಎಲ್ಲವನ್ನೂ ಮೆಚ್ಚಬೇಕಾದ್ದೇ. ನೆರೆದಿದ್ದ ಸಭಿಕರಿಗೆಲ್ಲಾ ಮಂತ್ರಾಲಯದ "ಕಿರು" ದರ್ಶನವನ್ನೇ ಮಾಡಿಸಿಬಿಟ್ಟರು ಆ ಮಕ್ಕಳು! ಕೆಲವರಿಗಂತೂ ಕಣ್ಣಲ್ಲಿ ನೀರೇ ಬಂದುಬಿಟ್ಟಿತ್ತು ನಾಟಕದ ಕೊನೆಗೆ! ಇಂಥಹ ಹರಸಾಹಸಕ್ಕೆ ಕೈ ಹಾಕಿ, ತಮ್ಮ ಅಮೂಲ್ಯವಾದ ಸಮಯವನ್ನು ಉಪಯೋಗಿಸಿಕೊಂಡು, ಮಕ್ಕಳನ್ನು ಅತ್ಯಂತ ಉನ್ನತ ದರ್ಜೆಯಲ್ಲಿ ತಯಾರು ಮಾಡಿ, ಸಭಿಕರ ಮೆಚ್ಚುಗೆ, ಪ್ರಶಂಸೆಗೆ ಪಾತ್ರರಾದವರು, ಶ್ರೀ ಪದ್ಮನಾಭ್ ಕೃಷ್ಣಗಿರಿಯವರು.

ಅಂದಿನ ಸೂತ್ರಧಾರರು, ನೆರೆದಿದ್ದ ಪ್ರೇಕ್ಷಕರನ್ನು ಆಗಾಗ ಜೊತೆಯಲ್ಲಿ ತೊಡಗಿಸಿಕೊಂಡು ಕಾರ್ಯಕ್ರಮಕ್ಕೆ ಮೆರುಗು ಕೊಟ್ಟಿದ್ದು ಬಹಳ ಚೆನ್ನಾಗಿತ್ತಾದರೂ, ಹೆಚ್ಚಾಗಿ ಆಂಗ್ಲ ಭಾಷೆಯ ಪದಗಳನ್ನೇ ಉಪಯೋಗಿಸಿದ್ದು ಎದ್ದು ಕಾಣುವಂತಿತ್ತು.

ಮಕ್ಕಳ ಮುಂದಾಳುತನದಲ್ಲಿ ಜರುಗಿದ ರಾಷ್ಟ್ರಗೀತೆಗಳ ನಂತರ ಎಲ್ಲರೂ ಉಡುಪಿ ಕೆಫೆಯವರು ತಂದಿರಿಸಿದ್ದ ರುಚಿಯಾದ ಊಟಕ್ಕಾಗಿ ಉತ್ಸುಕರಾಗಿ ಹೊರಟರು. ಎಲ್ಲರೂ ಅಂದಿನ ಕಾರ್ಯಕ್ರಮಗಳ ಬಗ್ಗೆ ಮಾತನಾಡುತ್ತಾ, ಸಂಜೆಯನ್ನು ಮೆಲುಕು ಹಾಕುತ್ತಾ, ಊಟವನ್ನು ಮುಗಿಸಿ, ನಿಧಾನವಾಗಿ ಹೊರಟರು. ಮತ್ತೊಂದು ಸುಂದರ ಸಂಜೆಯ ಸಮಾಪ್ತಿ.

ಯುಗಾದಿ 2012ರ ಚಿತ್ರಪಟಗಳನ್ನು ಮೂರ್ತಿಯವರ ಕ್ಯಾಮರಾ ಕಣ್ಣಿನಿಂದ ಇಲ್ಲಿ ನೋಡಿ ಆನಂದಿಸಿ.

**Happy Independence Day - 2012**

## ಅಧ್ಯಕ್ಷರ ಸಂದೇಶ

- ಜಯಶ್ರೀ ಮೂರ್ತಿ



*ಪ್ರಿಯ "ಕಂಪು" ಓದುಗರೆ,*

*ಮಲ್ಲಿಗೆ ಕನ್ನಡ ಸಂಘದ ಕಾರ್ಯಕಾರಿ ಸಮಿತಿಯ ಪರವಾಗಿ ನಿಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕ ನಮನಗಳು. ನಿಮಗೆ ತಿಳಿದಂತೆ, ಕಳೆದ ಯುಗಾದಿ ಕಾರ್ಯಕ್ರಮ ಸಮಾರಂಭದ ಸಂದರ್ಭದಿಂದ ನಮ್ಮ ತಂಡವು ಮಲ್ಲಿಗೆ ಕನ್ನಡ ಸಂಘ- ಉತ್ತರ ಟೆಕ್ಸಾಸ್ (MKANT) ಕಾರ್ಯಭಾರವನ್ನು ನಿರ್ವಹಿಸಿಕೊಂಡಿದೆ. ನಮ್ಮ ಸಮಿತಿಯ ಪರಿಚಯ ಹೀಗಿದೆ:*

**President** -ಶ್ರೀಮತಿ ಜಯಶ್ರೀ ಮೂರ್ತಿ

**Vice President** - ಶ್ರೀಮತಿ ನಿರುಪಮ ಶರ್ಮ



**Secretary** - ಶ್ರೀ ಅಮೃತ್ ದತ್ತಾತ್ರೇಯ

**Treasurer** - ಶ್ರೀಮತಿ ರೂಪಾ ಗೌಡ

**Executive Committee Members:**

ಶ್ರೀಮತಿ ವಿದ್ಯಾ ದತ್ತ
ಶ್ರೀಮತಿ ಸವಿತಾ ಪ್ರದೀಪ್
ಶ್ರೀ ತೇಜರಾಜ್ ಶ್ರೀನಿವಾಸನ್
ಶ್ರೀ ನಾಗರಾಜ್ ಹಿರೇಮಠ್

*ನಮ್ಮ ಮಲ್ಲಿಗೆ ಕನ್ನಡ ಸಂಘವು ಡಲ್ಲಾಸ್-ಫ಼ೋರ್ಟ್‌ವರ್ತ್ ಪ್ರಾಂತ್ಯಕ್ಕೆ "ವಲಸೆ" ಬಂದಿರುವ ಕನ್ನಡಿಗರ ಜೀವನದಲ್ಲಿ ಬಹಳ ಮಹತ್ತರವಾದ ಸ್ಥಾನವನ್ನು ಅಲಂಕರಿಸಿದೆ. ತಾಯ್ನಾಡಿನ ನೆನಪನ್ನು ಹಸನು ಮಾಡುವ, ಕನ್ನಡ ಪರಿವಾರಗಳನ್ನು ಬೆಸೆಯುವ, ಸ್ಥಳೀಯ ಕನ್ನಡ ಪ್ರತಿಭೆಯನ್ನು ಪೋಷಿಸುವ ಹಾಗು ಕನ್ನಡನಾಡಿನ ಉತ್ಕೃಷ್ಟ ಪ್ರತಿಭೆಯನ್ನು ಪ್ರದರ್ಶಿಸುವ ಮಾಧ್ಯಮವಾಗಿ ಹತ್ತು ಹಲವಾರು ವರ್ಷಗಳಿಂದ ಮೆರೆದು ಬಂದಿದೆ. ಇಂಥಾ ಅಮೂಲ್ಯವಾದ ಸಂಘಕ್ಕೆ ತಮ್ಮ ತನು, ಮನ, ಧನಗಳಿಂದ ಸೇವೆ ಸಲ್ಲಿಸಿರುವ ಎಲ್ಲಾ ಕನ್ನಡಿಗರಿಗೂ ಈ ಸಂಧರ್ಭದಲ್ಲಿ ಕೃತಜ್ಞತೆಗಳನ್ನು ಅರ್ಪಿಸಲು ಇಚ್ಛಿಸುತ್ತೇನೆ.*

*ಹೊಸ ವರ್ಷದ ಹಬ್ಬ "ಯುಗಾದಿ" ಕಾರ್ಯಕ್ರಮದ ನಂತರ, ಸಂಗೀತಪ್ರಿಯರಿಗೆ ಹಾಗೂ ಭಕ್ತಿಪ್ರಿಯರಿಗೆ ಹಬ್ಬವಾಗಿ ಮೂಡಿ ಬಂದದ್ದು "ಶ್ರೀಮತಿ ಸಂಗೀತ ಕಟ್ಟಿ" ಅವರ ಸಂಗೀತ ಕಾರ್ಯಕ್ರಮ. ನಮ್ಮ ಮಲ್ಲಿಗೆ ಕನ್ನಡ ಸಂಘದ ಪ್ರಥಮಾಧ್ಯಕ್ಷೆ "ಶ್ರೀಮತಿ ಕಲ್ಪನಾ ರಾವ್" ಅವರ ಸ್ಮರಣಾರ್ಥವಾಗಿ ಈ ಕಾರ್ಯಕ್ರಮ ಏರ್ಪಾಡಾಗಿತ್ತು. ಇದಕ್ಕೆ ತುಂಬು ಸಹಕಾರ ನೀಡಿದವರು ಅವರ ಪತಿ ಶ್ರೀಯುತ ರಾಮ್ ರಾವ್. ತದನಂತರ ಆಯೋಜಿತವಾಗಿದ್ದ "ಮಹಿಳಾ ಮಧ್ಯಾಹ್ನ" ಕಾರ್ಯಕ್ರಮ - ಒಂದು ನವೀನ ರೀತಿಯದಾಗಿದ್ದು ನೆರೆದಿದ್ದ ಎಲ್ಲಾ ಮಹಿಳೆಯರ ಮನ ಮುಟ್ಟಿತು. ಇದನ್ನು ನಡೆಸಿಕೊಟ್ಟ ಶ್ರೀಮತಿ ಉಮಾ ಸರ್ವೆಶ್ ಹಾಗು ಶ್ರೀಮತಿ ವನಜಾ ರಾಜನ್ ಅವರಿಗೆ ಮಲ್ಲಿಗೆ ಕನ್ನಡ ಸಂಘದ ಹೃತ್ಪೂರ್ವಕ ಕೃತಜ್ಞತೆಗಳು.*

*ಮುಂಬರುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಜೊತೆಗೆ ಇನ್ನೂ ಹಲವಾರು ಕಾರ್ಯಕ್ರಮಗಳು ನಡೆಸುವ ಯೋಜನೆಗಳು ರೂಪುಗೊಳ್ಳುತ್ತಿವೆ. ಎಲ್ಲದಕ್ಕೂ ನಿಮ್ಮ ಉತ್ಸಾಹಭರಿತವಾದ ಸಹಕಾರ ಸಿಗುವುದೆಂದು ನಂಬಿದ್ದೇನೆ. "ನಿಮ್ಮ" ಈ ಕನ್ನಡ ಸಂಘವು ನಿಮ್ಮ ಕಲಾತ್ಮಿಕತೆಗೆ ಕನ್ನಡಿಯಾಗಿ, ನಿಮ್ಮ ಸ್ನೇಹಮಯತೆಗೆ ಸಹಯೋಗಿಯಾಗಿ, ನಿಮ್ಮ ಕನ್ನಡ ಪ್ರೇಮಕ್ಕೆ ಪ್ರೇರಕ ಹಾಗೂ ಪೂರಕವಾಗಿರುವಂತೆ ನನ್ನ ನೇತೃತ್ವವನ್ನು ನಿರ್ವಹಿಸುವೆನೆಂದು ನಂಬಿದ್ದೇನೆ.*

*ಇಂತಿ ನಮಸ್ಕಾರಗಳು,*
*ಜಯಶ್ರೀ ಮೂರ್ತಿ*

**'An eye for an eye only ends up making the whole world blind' - Mahatma Gandhi**

ಮುಖಪುಟ

## ಸಂಗೀತ ಸಂಜೆ

- ಪೂರ್ಣಿಮ ಸುಬ್ರಹ್ಮಣ್ಯ

**ಜೂ**ನ್ ೩, ೨೦೧೨ ಸಂಜೆ Frisco

ಹನುಮಾನ್ ದೇವಾಲಯದ ಪ್ರಾಂಗಣದಲ್ಲಿ ಶ್ರೀಮತಿ.ಕಲ್ಪನಾ ರಾವ್ ಸ್ಮರಣಾರ್ಥ, ಅವರ ಪತಿ ಶ್ರೀ ರಾಮರಾವ್ ಅವರ ಸಹಕಾರದೊಂದಿಗೆ ಮಲ್ಲಿಗೆ ಕನ್ನಡ ಸಂಘ ಶ್ರೀಮತಿ. ಸಂಗೀತಾ ಕಟ್ಟಿ ಕುಲಕರ್ಣಿ ಅವರ ಸಂಗೀತ ಕಚೇರಿ




ಏರ್ಪಡಿಸಿತ್ತು.

ಸಂಘದ ಅಧ್ಯಕ್ಷೆ ಜಯಶ್ರೀ ಮೂರ್ತಿ ಸಭೆಯನ್ನು ಸ್ವಾಗತಿಸಿದರು. ಶ್ರೀಮತಿ ಸುಮಾ ಕುಲಕರ್ಣಿಯವರು ಕಲಾವಿದೆಯ ಕಿರುಪರಿಚಯ ಕೊಟ್ಟ ನಂತರ ಕಾರ್ಯಕ್ರಮ ಆರಂಭ. ನೆರೆದ ರಸಿಕರಿಗೆ ಸಂಗೀತ ಸೌರಭದ ಸುಗ್ಗಿ, ಅನ್ವರ್ಥನಾಮರಾದ ಸಂಗೀತಾ ಅವರಿಂದ. ಬಾಲ್ಯದಿಂದಲೇ ದಂತಕಥೆಯಾದ ಶ್ರೀಮತಿ.ಸಂಗೀತಾ ಅವರಿಗೆ ಹೆಚ್ಚು ಪರಿಚಯದ ಅವಶ್ಯಕತೆಯೇ ಇಲ್ಲ. ಆ ಸಂಜೆ ಮಧುವಂತಿಯಿಂದ ಭೈರವಿಯವರೆಗಿನ ರಸಯಾತ್ರೆ.

ರಾಗ್ ಮಧುವಂತಿಯಿಂದ ಮೊದಲಾದ ಕಚೇರಿ ಅಭಂಗ್, ಭಜನ್, ದಾಸರ ಪದ, ವಚನಗಳ ಸುಮಧುರ ಸಮ್ಮಿಳಿತ. ಕೇಳುಗರ ಕೋರಿಕೆಯ ಮೇರೆಗೆ "ಕರವ ಮುಗಿದ ಮುಖ್ಯಪ್ರಾಣ, ಭಾಗ್ಯದ ಲಕ್ಷ್ಮಿ ಬಾರಮ್ಮ, ಕರೆದರೆ ಬರಬಾರದೆ, ಕಂಗಳಿವ್ಯಾತಕೋ ಕಾವೇರಿ ರಂಗನ ನೋಡದ, ರಥವನೇರಿದ ರಾಘವೇಂದ್ರ, ಎನ್ನ ಕಾಯುವ" ಮುಂತಾದ ಅನೇಕ ಹಾಡುಗಳ ಸಮ್ಮೋಹಕ ಗಾಯನ. ಸಮರ್ಥ ತಬಲಾ ಸಾಥ್ ನೀಡಿದವರು ಶಂತನು ಭಟ್ಟಾಚಾರ್ಯ, ಹಾರ್ಮೋನಿಯಮ್‌ನಲ್ಲಿ ಪ್ರೇಮ್ ಶಾ ಹಾಗೂ ತಾಳದ ಜೊತೆ ರಮೇಶ್ ಹೆಗಡೆ.



ಹಲವರು ಭಾವಗೀತೆ ಮತ್ತು ಚಿತ್ರಗೀತೆಗಳ ಕೋರಿಕೆ ಸಲ್ಲಿಸಿದರೂ, ಪಕ್ಕವಾದ್ಯಗಳ ಕೊರತೆಯಿಂದ ಸಾಧ್ಯವಾಗದೆ ಸ್ವಲ್ಪ ಮಟ್ಟಿಗೆ ನಿರಾಶೆಯೂ ಆಯಿತು. ಸಮಯಾಭಾವದಿಂದ ಕಾರ್ಯಕ್ರಮ ಮುಗಿಯಿತಾದರೂ ಯಾರಿಗೂ ಏಳುವ ಮನಸ್ಸಿಲ್ಲ. ಮತ್ತಷ್ಟು ಹಾಡುಗಳಿಗೆ ಕಿವಿಯಾಗುವ ಉತ್ಸಾಹವೇ ಎಲ್ಲರಲ್ಲೂ.

ಶ್ರೀ ರಾಮರಾವ್ ಅವರು ಶ್ರೀಮತಿ ಸಂಗೀತಾರನ್ನು ಗುರವಿಸಿ ನೆನಪಿನ ಕಾಣಿಕೆ ಇತ್ತು ಗೌರವಿಸಿದರು . ನಂತರ ದೇವಾಲಯದ ಕೋಣೆಯೊಂದರಲ್ಲಿ ಸಂಗೀತಾರನ್ನು ಮಾತನಾಡಿಸಿ, ಅವರ ಜೊತೆ ಫೋಟೋ ತೆಗೆಸಿಕೊಳ್ಳುವ ಕಾರ್ಯಕ್ರಮ. ಎಲ್ಲರೊಡನೆ ಚೆನ್ನಾಗಿ ಮಾತಾಡಿ, ಫೋಟೋಗಳಿಗೆ ಸಹಕರಿಸಿದರು ಸಂಗೀತಾ.



"ಸಂಗೀತ ಎಂದಿಗೂ ಸುರಗಂಗೆಯಂತೆ" ಎನ್ನುತ್ತದೆ ಒಂದು ಗೀತೆ. ಕಾರ್ಯಕ್ರಮ ಮುಗಿಸಿ ಮನೆಗೆ ಹೊರಟಾಗ ಬಿಸಿಲು ಬೆಳದಿಂಗಳಾಗುವ ಸಮಯ. ಮನದ ಬೇಗುದಿ ನಾದದಿಂಪಿಗೆ ಕರಗಿ ಎಲ್ಲೆಲ್ಲೂ ಉಲ್ಲಾಸ. ಇಂಥಾ ಒಂದು ಸುಮಧುರ ಸಂಗೀತ ಸಂಜೆಯ ಸ್ವರಗಂಗೆಗೆ ಸಾವಿರದ ಶರಣು.

ಕಾರ್ಯಕ್ರಮದ ಚಿತ್ರಸಂಪುಟವನ್ನು ಇಲ್ಲಿ ನೋಡಬಹುದು.

**In the truest sense, freedom cannot be bestowed; it must be achieved. ~Franklin D. Roosevelt**

# ಮಹಿಳಾ ಮಧ್ಯಾಹ್ನದಿ ಮುದಗೊಂಡ ಮನಸ್ಸು

- ಪೂರ್ಣಿಮ ಸುಬ್ರಹ್ಮಣ್ಯ

**ಲ**ಲಿತೆಯನ್ನು "ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ ಸ್ವರೂಪಿಣೀ" ಎನ್ನುತ್ತದೆ ಸಹಸ್ರನಾಮ. ಹಲವಾರು ಬಾರಿ ನಾನು ಯೋಚಿಸಿದ್ದಿದೆ, ಅದೇಕೆ ಇಚ್ಛಾಶಕ್ತಿಯೇ ಮೊದಲು, ನಂತರ ಜ್ಞಾನ, ಕ್ರಿಯೆ ಎಂದು. ಸಾಧನೆಯ ಶಿಖರವೇರಲು ಹೊರಟವರಿಗೆ ಮನೋಬಲವಲ್ಲವೇ ಮೊದಲ ಮೆಟ್ಟಿಲು? ಈ ಮಾತು ಮತ್ತೆ ಮತ್ತೆ ಮನಸಿನಲಿ ಮೂಡಿದ್ದು ಮಲ್ಲಿಗೆ ಸಂಘ ಏರ್ಪಡಿಸಿದ್ದ "ಮಹಿಳಾ ಮಧ್ಯಾಹ್ನ"ದಲ್ಲಿ ಪಾಲ್ಗೊಂಡಾಗ.

Coppell ಗ್ರಂಥಾಲಯದಲ್ಲಿ ಜೂನ್ ೨೪ರ ಮಧ್ಯಾಹ್ನ - ಹೊರಗೆ ಬಿರು ಬಿಸಿಲು, ಒಳಗೆ "It was really COOL !" ಅರ್ಚನಾ ಮೂರ್ತಿ ಪ್ರಾರ್ಥನೆಯಲ್ಲಿ ಪಾರ್ವತೀಶನನ್ನು ನೆನೆದ ನಂತರ , ಸಂಘದ ಮುಂದಾಳು ಜಯಶ್ರೀ ಮೂರ್ತಿ ಚಿಕ್ಕ ಚೊಕ್ಕ ಸ್ವಾಗತದೊಂದಿಗೆ ಅಂದಿನ ಮುಖ್ಯ ಮಹಿಳಾಮಣಿಯರನ್ನು ಪರಿಚಯಿಸಿದರು.

ಶ್ರೀಮತಿ ವನಜಾ ರಾಜನ್ ಅವರು, ತಮ್ಮ ಬೆಂಗಳೂರಿನ ವೈಟ್ ಹೌಸ್ ಬಿಟ್ಟು ಸದ್ಯಕ್ಕೆ "ಕ್ಯಾಂಪ್ ಡ್ಯಾಲ್ಲಸ್" ನಲ್ಲಿರುವ ಕಾರಣ ಮೊಮ್ಮಕ್ಕಳ ಲಾಲನೆ ಪಾಲನೆ. ನಗುಮೊಗದ, ಚುರುಕು ಮಾತಿನ ವನಜಾ ತಮ್ಮ ಹಾಸ್ಯಭರಿತ ಮಾತುಗಳಿಂದ ಎಲ್ಲರ ಮನರಂಜಿಸಿದರು. ತಾವು ನಡೆದು ಬಂದ ಹಾದಿಯನ್ನು ವಿವರಿಸಿದರು. "ಕಣ್ಣಂಚಿನಲ್ಲಿ ಪೂರ್ವ-ಪಶ್ಚಿಮ", "ಹರಟೆಗಳು ಮತ್ತು ಇತರ ಲೇಖನಗಳು" ಎಂಬ ಎರಡು ಪುಸ್ತಕ ಪ್ರಕಟಿಸಿರುವ ಇವರು ತಮ್ಮ ಕೆಲವು ಹರಟೆಗಳನ್ನು ನಮ್ಮೊಡನೆ ಹಂಚಿಕೊಂಡರು. ದೇವಲೋಕದಲ್ಲಿ ತುರ್ತುಸಭೆ, ಉಪವಾಸ-ಫಲಾಹಾರ ಮುಂತಾದ ಪ್ರಸಂಗಗಳನ್ನು ಕೇಳಿ ಎಲ್ಲರೂ ನಕ್ಕಿದ್ದೇ ನಕ್ಕಿದ್ದು. ಬೇಸರವಾಗದಂತೆ ನಮ್ಮ ಅನುಭವಗಳನ್ನು ದಾಖಲಿಸುವ, ಡೈರಿ ಬರೆಯುವ ಹವ್ಯಾಸದ ಬಗ್ಗೆ ಕಿವಿಮಾತು ಹೇಳಿದರು.ಹಾಸ್ಯ ಅಪಹಾಸ್ಯ, ಹಾಸ್ಯಾಸ್ಪದವಾಗುವ ಅಪಾಯದ ಬಗ್ಗೆ, ಬಗ್ಗೆ ತಮ್ಮದೇ ವಿಶಿಷ್ಟ ಶೈಲಿಯಲ್ಲಿ ವಿವರಿಸಿದರು.



ಶ್ರೀಮತಿ ಉಮಾ ಸರ್ವೇಶ್, ಈಗಾಗಲೆ ಸಾಕಷ್ಟು ಜನರಿಗೆ ಪರಿಚಿತರು. ರಂಗೋಲಿ, ನಾಟಕ ರಚನೆ, ಕೇಶಾಲಂಕಾರ, ತರಕಾರಿ ಕೆತ್ತನೆ ಮುಂತಾದ ಕಲಾಪ್ರಾಕಾರಗಳಲ್ಲಿ ಪರಿಣಿತರು ಉಮಾ. ಅವರು ತಮ್ಮ ಸುಪ್ತ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದ ದಾವಣಗೆರೆ ಗೆಳೆಯರನ್ನು ಆರಂಭದಲ್ಲಿಯೇ ನೆನೆದರು . ನಂತರ ತಮ್ಮ ಕೇಶಾಲಂಕಾರ ನಿಪುಣತೆ ತೋರಿದ ಅವರು, ಕೇವಲ ೧-೨ ನಿಮಿಶಗಳ ಅವಧಿಯಲ್ಲಿ ಅನೇಕರ ತುರುಬು ಸಿಂಗರಿಸಿದರು. ಕೇವಲ ೨-೩ ರಬ್ಬರ್ ಬ್ಯಾಂಡ್ ಬಳಸಿ, ಹೆಚ್ಚು ಪಿನ್ ಗಳನ್ನು ಬಳಸದೆ ಸಿಂಗರಿಸಿದ್ದು ವಿಶೇಷ. ನಂತರ ಅವರ ಕೈಚಳಕದಲ್ಲಿ ಕಲ್ಲಂಗಡಿ ಹೂವಿನ ಬುಟ್ಟಿಯಾದರೆ, ಕ್ಯಾರೆಟ್-ಮೂಲಂಗಿ ಹೂಗಳಾದವು. ಈರುಳ್ಳಿ ನೈದಿಲೆ, ಮೂಲಂಗಿ-ಕ್ಯಾರೆಟ್ಗಳ ಹುಡುಗಿ ಮುಂತಾದ ಅನೇಕ ಮಾದರಿಗಳು ತಯಾರಾದವು.

ಜಯಶ್ರೀ ಅವರು ವನಜಾ ರಾಜನ್ ಹಾಗೂ ಉಮಾ ಸರ್ವೇಶ್ ಅವರಿಗೆ ನೆನಪಿನ ಕಾಣಿಕೆ ಇತ್ತು ಗೌರವಿಸಿದರು. ಕಾರ್ಯಕ್ರಮದ ನಂತರ, ನನ್ನ ಮನದಲ್ಲಿ ಮತ್ತದೇ ಮೆಲುಕು "ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿ ಸ್ವರೂಪಿಣೀ". ನಿಜ, ಇವರ್ಯಾರೂ ವಿಶ್ವಮಾನ್ಯರಲ್ಲ, ಹೇಳಿಕೊಳ್ಳುವಂತಹ ಪ್ರಶಸ್ತಿ-ಪುರಸ್ಕಾರಗಳ ಕಿರೀಟ ಹೊತ್ತವರಲ್ಲ. ಆದರೆ ಇವರು ಮನೆಯಂಗಳದಿ ನೆಟ್ಟ ಮಲ್ಲಿಗೆಯ ಕಂಪು. ಈ ಉತ್ಸಾಹೀ ಮಹಿಳೆಯರು, ತಮ್ಮ ದಿನನಿತ್ಯದ ಕೆಲಸ-ಬೊಗಸೆ-ರಗಳೆಗಳ ನಡುವೆಯೂ ನಮ್ಮಲ್ಲಿ ನವೋಲ್ಲಾಸ ತುಂಬುವ ಜೀವನ್ಮುಖಿಯರು.

ಕಾರ್ಯಕ್ರಮದ ಚಿತ್ರಸಂಪುಟವನ್ನು ಇಲ್ಲಿ ನೋಡಬಹುದು.

"Vande Mataram" - Bankima Chandra Chatarjee

ಮುಖಪುಟ

# ಕೈಯಲ್ಲಾಗುತ್ತಾ?



- ಸುಧಾ ಶ್ರೀನಾಥ್

**“ಅಪ್ಪ** ಈವತ್ತು ದೇವಸ್ಥಾನಕ್ಕೆ ನಡ್ಕೊಂಡು ಬರ್ತಾರಂತೆ. Even though the weather is so very good to take a long walk, ಅಷ್ಟು ದೂರ ನಡೆಯೋದಿಕ್ಕೆ ನಮ್ಮ ಕೈಲಾಗೋದಿಲ್ಲ. ನಾವಿಬ್ಬರೂ carನಲ್ಲೇ ಹೋಗೋಣ. ಕನ್ನಡ ಕ್ಲಾಸ್ ಗೆ late ಆಗ್ಬಾರದಲ್ವಾ?” ಮನಸ್ಸಿನಲ್ಲಿ ಇದ್ದುದ್ದನ್ನು ಮಗಳಿಗೆ ಹೇಳಿದೆ.

ಅಮೇರಿಕಕ್ಕೆ ಬಂದ್ಮೇಲೆ ನಡೆಯೋದೆ ಕಡಿಮೆಯಾಗಿ ಹೋಗಿತ್ತು. ಒಂದು ಭಾನುವಾರ DFW temple ಗೆ ನಡ್ಕೊಂಡು ಹೋಗ್ಬೇಕು ಅಂತಾ ಮನಸ್ಸು ಮಾಡಿದ್ದ ಡಾ.ಶ್ರೀನಾಥ್ ರವರು ಬೆಳಿಗ್ಗೆ ಬೇಗನೇ ಹೊರಟರು ಹತ್ತು ಘಂಟೆಗೆ ಶುರುವಾಗುವ ‘ಅರಳು ಮಲ್ಲಿಗೆ’ ಕ್ಲಾಸ್ ಗೆಂದು. ಆಗ ನಾವಿದ್ದದ್ದು ಅರ್ವಿಂಗ್ ನ Las Colinas ನಲ್ಲಿ. ನಮ್ಮ ಮನೆಯಿಂದ DFW ದೇವಸ್ಥಾನಕ್ಕೆ ಸುಮಾರು ಹತ್ತು ಮೈಲಿಗಳಷ್ಟು ದೂರವಿತ್ತು. ನಾವಿಬ್ಬರೂ ತಯಾರಾಗಿ ಕಾರಲ್ಲಿ ಹೋಗುತ್ತಿದ್ದಾಗ ದಾರೀಲಿ ಅಪ್ಪನ್ನ ಹುಡುಕುತ್ತಾನೇ ಇದ್ದಳು. MacArthur ರಸ್ತೇಲಿ ರಸ್ತೆಯ ಪಕ್ಕದಲ್ಲಿ ಅಪ್ಪ ನಡೆಯುತ್ತಿರುವುದನ್ನು ಕಂಡು “ಅಮ್ಮಾ, ನಾವೂ ಕಾರಿಲ್ಲೇ ನಿಲ್ಲಿಸಿ, ಅಪ್ಪನ ಜೊತೆಯಲ್ಲಿ ನಡೀಬಹುದಾ?” ಪುಟ್ಟಿಯ ಪ್ರಶ್ನೆ.

“ನನ್ನ ಕೈಯಲ್ಲಾಗೋದಿಲ್ಲ ಕಂದಾ, ಅಷ್ಟು ದೂರ ನಡೆಯೋದಿಕ್ಕೆ” ನನ್ನ standard ಉತ್ತರ. “ನಡೆಯೋದು ಕಾಲಲ್ಲಿ ಅಲ್ವಾ, ಅಮ್ಮಾ? ಯಾಕೆ ನೀನು ಕೈಯಲ್ಲಾಗೋದಿಲ್ಲ ಅಂತೀಯ? ಕಾಲಲ್ಲಾಗೋದಿಲ್ಲ ಅಂದ್ರೆ ತಪ್ಪಾಗುತ್ತಾ?” ಶುರುವಾಯ್ತು ಬೇತಾಳ ಪ್ರಶ್ನೆಗಳ ಸರಮಾಲೆ.

“ಹೌದು ಪುಟ್ಟೀ, ನೀನು ಹೇಳೋದೂ ಸರೀನೇ. ಆದ್ರೆ ಸಾಧ್ಯವಾಗೋದಿಲ್ಲ ಅನ್ನೋ ಅರ್ಥದಲ್ಲಿ ನಾವು ಹಾಗೆ ಹೇಳ್ತೀವಿ, ಅಷ್ಟೇ. ಕೆಲವು expressions ಬಳಕೆಯಿಂದ dictionary meaning ಅಲ್ಲದೇ ಬೇರೇನೇ ಅರ್ಥ ಕೊಡುವಂತಾಗಿರುತ್ತವೆ. ಅದು ಕನ್ನಡ ಮಾತಾಡುವುದರಿಂದ ಮಾತ್ರ ಪರಿಚಯ ಆಗುತ್ತೆ.”

ಅಮೇರಿಕದಲ್ಲಿ ಇದ್ದುದ್ದರಿಂದ ಮಕ್ಕಳು ಕನ್ನಡ ಕೇಳುವುದೇ ಕಡಿಮೆ. ಮಾತಾಡುವಾಗ ಅವರಿಗೆ ಹೆಜ್ಜೆ ಹೆಜ್ಜೆಗೂ ಪ್ರಶ್ನೆಗಳಿರುತ್ವೆ. ಅವರು ಜಾಸ್ತಿ ಕೇಳಿರುವ ಭಾಷೆ English ಆಗಿರುವುದರಿಂದ ಎರಡನ್ನೂ ಹೋಲಿಸಿ, ಎಲ್ಲೆಲ್ಲಿ ಹೊಂದಾಣಿಕೆ ಆಗುವುದಿಲ್ಲವೋ ಅಲ್ಲಿ ಕುತೂಹಲದಿಂದ ಪ್ರಶ್ನೆಗಳು ಕೇಳ್ತಾನೇ ಇರ್ತಾರೆ. ಅವುಗಳಿಗೆ ಉತ್ತರಿಸುವ ತಾಳ್ಮೆಯಾಗಲೀ, ಜಾಣ್ಮೆಯಾಗಲೀ ನನಗಿರಲಿಲ್ಲ. ‘ಅರಳುಮಲ್ಲಿಗೆ’ ಕನ್ನಡ ಕ್ಲಾಸ್ ಶುರುವಾದಮೇಲೆ ಅವೆರಡನ್ನೂ ಪ್ರಜ್ಞಾಪೂರ್ವಕವಾಗಿ ಕಲಿಯಲೇಬೇಕಾಯ್ತು. ಮಕ್ಕಳು ಕರ್ನಾಟಕದಲ್ಲಿ ಬೆಳೆದರೆ ತಾನೇ ತಾನಾಗಿ ಬರುವ ಪದಗಳೂ ಸಹ ಈಗ ಪರಿಶ್ರಮ ಹಾಕಿ ಕಲಿಯಬೇಕಾಗಿತ್ತು. ಬಹುಶಃ ಎಲ್ಲ ಅಮೆರಿಕನ್ನಡ ತಂದೆತಾಯಿಯರಿಗೂ ಹೀಗೇ ಅನ್ನಿಸಿರಬಹುದು. ಅಮೇರಿಕದಲ್ಲಿ ಬೆಳೆದ ಮಕ್ಕಳ ಪ್ರಶ್ನೆಗಳ styleಏ ಬೇರೇ ಎನ್ನುವುದಂತೂ ನಿಜ. ಅವರು ಗಮನಿಸುವಷ್ಟು ಸೂಕ್ಷ್ಮಾತಿಸೂಕ್ಷ್ಮಗಳು ನಾನಂತೂ ಆವಯಸ್ಸಿನಲ್ಲಿ ಗಮನಿಸುತ್ತಿರಲಿಲ್ಲ ಎನಿಸಿದ್ದುಂಟು. ಕೆಲವು ಸಲ ನಾವು ಒರಟೇ ಎನ್ನುವ ಸಂಶಯ ಮೂಡಿದ್ದೂ ಉಂಟು. To tell you the truth, it added a new interesting dimension to my thinking. ಮಕ್ಕಳ ಪ್ರಶ್ನೆಗಳ ಮತ್ತು ನನ್ನ ಅನಿಸಿಕೆಗಳ ಒಂದು ಪುಟ್ಟ ಅವಲೋಕನ ಇಲ್ಲಿದೆ. ಇವುಗಳಲ್ಲಿ ಕೆಲವು ನಿಮ್ಮ ಅನುಭವಕ್ಕೂ ಬಂದಿರಬಹುದು. ಬನ್ನಿ, ನನ್ನ ಜೊತೆ ನನ್ನ ನೆನಪಿನ ದೋಣಿಯ ಪಯಣಕ್ಕೆ. ನಿಮ್ಮಲ್ಲಿ ಕನ್ನಡ ಕಲಿಯುವ ಮಕ್ಕಳಿದ್ದರೆ ಅವರನ್ನೂ ಕರೆತನ್ನಿ. ಜೊತೆಯಲ್ಲಿ ಮಕ್ಕಳಿದ್ದರೆ ಅದರಿಂದ ಈ ನೆನಪುಗಳಿಗೊಂದು ಅರ್ಥಪೂರ್ಣ ಮೆರುಗು ಸಿಗುತ್ತೆ.

ಒಮ್ಮೆ ಪುಟ್ಟ ಮಗಳನ್ನು “ಹೋಗೇ, ಯಾವಾಗ್ಲೂ ಏನೇನೋ ಪ್ರಶ್ನೆ ಕೇಳ್ತಾನೇ ಇರ್ತೀಯ” ಅಂದರೆ “ಹೋಗು ಎನ್ನಬೇಡ ಅಮ್ಮ please! ”ಎಂದು ನಿಸ್ಸಹಾಯಕಳಂತೆ ಹೋಗುವುದೆಲ್ಲಿಗೆ ಎಂದು ತಿಳಿಯದೇ ಅಳುವುದಕ್ಕೆ ಶುರುಮಾಡಿದಳು.

ಅದನ್ನು ನೋಡಿ “ಹೋಗು ಅಂದ್ರೆ ಎಲ್ಲಿಗಾದರೂ ಹೋಗು ಎಂದರ್ಥ ಅಲ್ಲ ಪುಟ್ಟೀ. ನಾನು ಯಾವುದೋ ಕೆಲಸದಲ್ಲೋ ಅಥವ ಯೋಚನೆಯಲ್ಲೋ ಇದ್ದಾಗ ತೊಂದ್ರೆ ಕೊಡ್ಬೇಡಾ ಅಂತ. It just means don't bother me right now ಅಂತಾ ಅಷ್ಟೇ.” ಎಂದು ಸಮಾಧಾನಪಡಿಸಬೇಕಾಯ್ತು. ಸರಿಯಾಗಿ ಅರ್ಥವಾಗದಿದ್ದಾಗ ಪುಟ್ಟ ಮಕ್ಕಳೂ ಸಹ ತಪ್ಪು ಕಲ್ಪನೆಗಳಿಂದ ತುಂಬಾ ದುಃಖ ಅನುಭವಿಸುತ್ತಾರೆಂದು ಗೊತ್ತಾಗಿದ್ದಂದೇ.

ಒಂದು ದಿನ ನಮ್ಮ ಪರಿಚಯದವರೊಬ್ಬರಿಗೆ ಹೆರಿಗೆಯಾಯ್ತೆಂದು ಡಾ. ಶ್ರೀನಾಥ್ ರವರು ನನಗೆ ತಿಳಿಸಿದರು. ಹೆಣ್ಣೋ ಗಂಡೋ ಎಂದು ನಾನು ಕೇಳಿದ ಪ್ರಶ್ನೆಗೆ ಅವರು “ಹೆಣ್ಣು ಅಥವಾ ಗಂಡು. ಸರಿಯಾಗಿ ನೆನಪಿಲ್ಲ” ಎಂದು ಹೇಳಿದ್ದು ಕೇಳಿ “is there any other choice? ” ಎಂದು ನಗಾಡಿದ ಮಗಳನ್ನು ನೋಡಿ ನಾವೂ ಮುಜುಗರದಿಂದ ಪೆಚ್ಚು ಪೆಚ್ಚಾಗಿ ನಕ್ಕಿದ್ದುಂಟು.

‘ಅವ್ರ ಹೆಸರು ಅದೇನೋ ಇದೆ. ನೆನಪಿಗೆ ಬರ್ತಾ ಇಲ್ಲ.’ ಎನ್ನುವ statement ಸರ್ವೇಸಾಮಾನ್ಯ. ಅಥವಾ ‘ಅದರ ಹೆಸರು ಅದೇನೋ ಇದೆಯಪ್ಪಾ’ ಅನ್ನೋದೂ ಕೇಳಿರಬಹುದು. ಒಂದು ಸಲ ಹೀಗೆ “ಅವ್ರ ಊರ ಹೆಸರು ಅದೇನೋ ಇದೆ” ಎಂದು ಹೇಳಿದಾಗ “ಹೆಸರು ಏನೋ ಇದ್ದೇ ಇರುತ್ತೆ, ಅಲ್ವಾ? BIG help! ” ಎಂದು ಅವಳು ಛೇಡಿಸಿದಾಗ ನಮ್ಮ ಮೂರ್ಖತೆಯ ಅರಿವಾಗಿದ್ದುಂಟು.

“ನೀನು ಯಾವಾಗ್ಲೂ ಇಷ್ಟೇ; lunch box ನ ಸಿಂಕ್ ಒಳಗಿಡೋದು ಮರ್ತೇಹೋಗ್ತೀಯ” ಎಂದು ಸಿಡುಕಿದಾಗ “ಯಾವಾಗ್ಲೂ ಅಲ್ಲಮ್ಮಾ. Sometimes I forget, sorry!” ಎಂದು ಮುಖ ಸಣ್ಣದು ಮಾಡಿಕೊಂಡ

**Those who deny freedom to others deserve it not for themselves. ~Abraham Lincoln**

ಯಾರದೋ ಅಸಹನೀಯ ವರ್ತನೆಯಿಂದ ನೊಂದು "ಅವ್ರು ಬದಲಾಗೋದಿಲ್ಲ. ನಾಯಿ ಬಾಲ ಡೊಂಕು ಅಂದಹಾಗೆ" ಅಂದದ್ದು ಕೇಳಿ, ನಮ್ಮ ಪುಟ್ಟಿ "ಅಮ್ಮಾ! That is too strong a statement. They might change for the better later sometime." ಅಂದಾಗ ಹೌದಲ್ವಾ ನಾವಷ್ಟು ಕಠಿಣವಾಗಿ ಯೋಚಿಸಬಾರದು ಎನಿಸಿದ್ದುಂಟು.

ಮಕ್ಕಳು ನಾವಾಡುವ ಪ್ರತಿಯೊಂದು ಮಾತನ್ನೂ ಗಮನಿಸುತ್ತಾ ಇರುತ್ತಾರೆ. ಆಸಕ್ತಿ ಇರುವ ಮಕ್ಕಳಿಗೆ ಯಾವುದಾದ್ರೂ ಒಂದನ್ನು ವಿವರಿಸಿ ಹೇಳಿದರೆ ಸಾಕು, ಹತ್ತು ಕಲಿಯುವ ಜಾಣ್ಮೆ ಇರುತ್ತೆ. ಅವರಿಗೆ ಯಾವಾಗ literal meaning ಅನ್ವಯಿಸುವುದಿಲ್ಲ ಎನ್ನುವುದು ಸರಿಯಾಗಿ ಸಹನೆಯಿಂದ ವಿವರಿಸುವ ಪ್ರಯತ್ನ ನಾವು ಮಾಡಿದರೆ ನಮಗೇ ಆಶ್ಚರ್ಯವಾಗುವಷ್ಟು ಕಲಿತುಬಿಡ್ತಾರೆ.

"ಆಯ್ತು, ಬಿಡು! ತರೋಣ" ಅಂತಲೋ "ಆಯ್ತು, ಬಿಡು! ಹೋಗೋಣ." ಅಂತಲೋ ನೀವು ಕೇಳಿರಬಹುದು. ಏನು ಆಯ್ತು, ಯಾವುದು ಬಿಡಬೇಕು ಎಂದು ನಾನೆಂದೂ ಯೋಚಿಸಿಯೇ ಇರಲಿಲ್ಲ.

"ಸರಿ, ನಿನ್ನ ಅಭಿಪ್ರಾಯ ಗೊತ್ತಾಯ್ತು, ಇನ್ನು ವಾದಿಸುವುದು ಬಿಡು ಅನ್ನುವ ಅರ್ಥದಲ್ಲಿ ಈ ಬಳಕೆ ಬಂದಿರಬಹುದಾ " ಎಂದು ನಮ್ಮ ಪುಟಾಣಿಯೇ ವಿವರಣೆ ಹುಡಿಕಿದಾಗ ಹೌದೆನಿಸಿ ಹೆಮ್ಮೆ ಪಟ್ಟಿದ್ದುಂಟು. ಒಂದು ಸಲ "ಅದೇನೋ ಹೇಳ್ತಾರಲ್ಲ ಹಾಗೆ" ಅಂದಾಗ "ಅದೇನು ಹೇಳ್ತಾರೆ ಅಮ್ಮಾ? " ಎಂದು ಕೇಳಿದಳು. ಸಂದರ್ಭಕ್ಕೆ ಸರಿಯಾದ ಗಾದೆ ನೆನಪಿಗೆ ಬಾರದೆ ಅಥವಾ ಏನೂ ಹೇಳಲು ತೋಚದೇ "ಗಾದೆ ನೆನಪಿಗೆ ಬಾರದೇ ಇದ್ದುದ್ದರಿಂದ ಹಾಗೆ ಹೇಳಿದೆ ಪುಟ್ಟೀ" ಎಂದು ತಲೆತಗ್ಗಿಸಿದ್ದು ನೆನಪುಂಟು.

"ನೆನ್ನೆ ice ಮೇಲೆ ಜಾರಿ ಬಿದ್ದೆ. ಮೂಕ ಪೆಟ್ಟಾಗಿದೆ" ಅಂತಾ ನಮ್ಮ ಸ್ನೇಹಿತರೊಬ್ಬರು ಹೇಳಿದ್ದು ಕೇಳಿದಾಗ ಬಂದ ಪ್ರಶ್ನೆ "ಅಮ್ಮಾ ಮೂಕ ಪೆಟ್ಟು ಅಂದ್ರೆ ಏನು? "

ಅದನ್ನು ವಿವರಿಸಿ ಹೇಳಿದಾಗ "ಅದನ್ನು ಮೂಕಪೆಟ್ಟು ಅಂತಾ ಯಾಕೆ ಅಂತಾರೆ. ಪೆಟ್ಟಾಗಿದೆ ಅಂತಾ ನಮಗೆ ಕಾಣೋಲ್ಲ ಅಲ್ವಾ, ಕುರುಡುಪೆಟ್ಟು ಅನ್ನಬಹುದಾ? No, It doesn't sound right. Open wound ಆದ್ರೆ ಅದರ ಬಾಯಿ open ಮಾಡಿದಹಾಗೆ. ಅದನ್ನು ಮಾತಾಡೋ ಪೆಟ್ಟು ಅನ್ಬೇಕಾ ಹಾಗಾದ್ರೆ?" ಎಂದು ತುಂಟತನ ತೋರಿಸಿದಳು.

"ನೀವುಗಳು ಮಾತನಾಡುವಾಗ ಲೋಪ ಮಾಡುತ್ತೀರಿ. For example ಗಾಬರಿ ಎನ್ನುವ ಪದವನ್ನು ನೀವು ಗಾಬ್ರಿ ಎಂದು ಉಚ್ಚರಿಸುತ್ತೀರಿ" ಎಂದು ಮಂಗಳೂರಿನವರಾದ ವಿದ್ಯಾರ್ಥಿಯ ಪೋಷಕರೊಬ್ಬರು ಒಂದು ದಿನ ಆಕ್ಷೇಪವೆತ್ತಿದರು. "ಗಾಬರಿಯಾದಾಗ ಗಾ ಬ ರಿ ಎಂದು ಬಿಡಿಸಿ ಹೇಳುವುದಕ್ಕಾಗೋಲ್ರೀ. ಅದಕ್ಕೇ ಅದು 'ಗಾಬ್ರಿ' ಯಾಗುತ್ತೆ" ಎಂಬ ತಮಾಷೆಯ ಉತ್ತರ ಕೇಳಿ ಇಡೀ ಕ್ಲಾಸ್ ನಗೆಗಡಲಲ್ಲಿ ಮುಳುಗಿದ್ದುಂಟು (ತೇಲಿದ್ದುಂಟು!).

ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ ಮಕ್ಕಳಿಗೆ 'ಜನಗಣಮನ' ಕಲಿಸಬೇಕೆಂದು ಪೋಷಕರೊಬ್ಬರು ಸಲಹೆ ಕೊಟ್ಟರು. "ನೋಡಿ ನೀವು ಸ್ವಾತಂತ್ರ್ಯ ಅನ್ನಲಿಕ್ಕೆ ಸ್ವಾತಂತ್ರ ಅನ್ನುತ್ತೀರಿ. ಕೆಲವರ ಬಾಯಲ್ಲಂತೂ ಅದು ಸೊತಂತ್ರ ಆಗುತ್ತದೆ." ಮಂಗಳೂರಿನವರು ಮತ್ತೆ ನಮ್ಮ ತಪ್ಪನ್ನು ಎತ್ತಿ ತೋರಿಸುತ್ತಿದ್ದಾರೆನ್ನಿಸಿತು. ತಕ್ಷಣವೇ ತಾವೇ "ನಿಮಗೆ ಹೇಗೆ ಬರುತ್ತೋ ಹಾಗೆ ಹೇಳುವ ಸ್ವಾತಂತ್ರ್ಯ ನಿಮಗಿದೆ" ಎಂದು ಹಾಸ್ಯ ಮಾಡಿದಾಗ ಎಲ್ಲರಿಗೂ ನಗು ಉಕ್ಕಿಬಂತು.

"ಬೆಳಿಗ್ಗೆ ಮಕ್ಕಳು homework ಮಾಡಾಕ್ ಹತ್ತಿದ್ರು. ಇಂಡಿಯಾಯಿಂದ ನಮ್ಮ ತಾಯೀದು ಫೋನ್ ಬಂತ್ರೀ. ಆದ್ರಿಂದ ಅದು ಮುಗಿಸಾಕ್ ಆಗಲಿಲ್ರೀ" ಅಂತಾ ತಾಯಿಯೊಬ್ಬರು ಹೇಳಿದಾಗ ಮಕ್ಕಳಿಗೆ ಧಾರವಾಡ ಕನ್ನಡದ 'ಮಾಡಾಕ್ ಹತ್ತಿದ್ರು' ಅಂದ್ರೆ ಮಾಡುವುದಕ್ಕೆ ಶುರುಮಾಡಿದರು ಎಂದು ವಿವರಿಸಬೇಕಾಯ್ತು. ಅಲ್ಲಿಯ 'ಇಳಿಯಾಕ್ ಹತ್ತಿದ್ರು' ಪದ ವಿವರಣೆ ಕೇಳಿ ಇಡೀ ಕ್ಲಾಸ್ ನಕ್ಕಿದ್ದೋ ನಕ್ಕಿದ್ದು. ಇಂತಹ ನೆನಪುಗಳನ್ನು ಸವಿಯದೇ ಇರಲು ಯಾರ ಕೈಲಾಗುತ್ತೆ ಹೇಳಿ?

ಸದ್ಯಕ್ಕೆ ಈ ನೆನಪಿನ ದೋಣಿಯಿಂದ ಇಳಿದು ಸ್ವಾತಂತ್ರ್ಯ ದಿನದ ಸಂಭ್ರಮಕ್ಕೆ ತಯಾರಿ ನಡೆಸೋಣ್ವೇ? ನಿಮಗೆಲ್ಲರಿಗೂ ಸ್ವಾತಂತ್ರ್ಯ ದಿನೋತ್ಸವದ ಶುಭಾಶಯಗಳು. On this special occasion, let's be filled with grateful thoughts towards all those who sacrificed their lives for our freedom. ಎಲ್ಲಿದ್ದರೂ ಎಂತಿದ್ದರೂ ನಾವು ತಾಯಿ ಭಾರತಿಯ ಮಕ್ಕಳು. ಜೈ ಭಾರತ ಮಾತಾ!



**Swaraj is my birthright - Bala Gangadhara Tilak**

## ಕನ್ನಡದಿಂದ ಕಂಗ್ಲೀಷ್

- ನಾಗಶ್ರೀ ಶ್ರೀನಿವಾಸ್




**(ಇದನ್ನ ಹಾಡಿನ ರೀತಿಯಲ್ಲಿ ಓದಿರಿ)**

೧೦೧ ನೆನಪು ಹಾರ್ಟ್ ಡೀಪ್ ನಿಂದ
ಸಾಂಗಾಗಿ ಕಮ್ತು ಆನಂದದಿಂದ
--------------
ಬ್ಯೂಟೀ ಒಂದು ಅಸ್ಕ್ತೀನಿ ನೋ ಅಂದೆ ಗಿವ್ ತೀಯ
ನಿನ್ನ ಲವ್ ಮಾಡ್ತೀನಿ ಸೋಲ್ ಹಾರ್ಟ್ ಗಿವ್ ತೀಯ
--------------
ಫ್ಲವರ್ ಒಂದು ನಿಯರ್ ಬಂದು ಟಚ್ಚಿತು ಎನ್ನದೆಯಾ
ವಾಟ್ ಎಂದು ಆಸ್ಕಲು ಟೆಲ್ಲಿತು ಹನಿಯಂತ ಸವಿನುಡಿಯಾ
--------------
ಯಾರೇ ಶೌಟ್ ಮಾಡಲಿ ಊರೇ ಫೈಟ್ ಮಾಡಲಿ
ಬಫೇಲೋ ನಿನಗೆ ಈಕ್ವಲ್ ಇಲ್ಲ
ಬಿಸಿಲು ರೈನು ಬಿರುಗಾಳಿ ಕೋಲ್ಡ್ ಗೆ
ನಿಲುಕದೆ ಫಾರ್ವರ್ಡ್ ಸಾಗುವೆ
--------------
ಮೀ ಒಂದು ಬ್ಯಾಂಕು ಯೂ ಒಂದು ಬ್ಯಾಂಕು
ಸೋಲ್ ಸೋಲ್ ದೂರ ಲವ್ ಹಾರ್ಟ್ ಭಾರ
--------------

## ಸಂಪಾದಕೀಯ

- ಪೂರ್ಣಿಮ ಸುಬ್ರಹ್ಮಣ್ಯ





ಆತ್ಮೀಯರೆ,

ನಿಮಗೆಲ್ಲರಿಗೂ ಕಂಪು ಸ್ವಾತಂತ್ರ್ಯ ಸಂಚಿಕೆಗೆ ಸ್ವಾಗತ ಹಾಗೂ ಸ್ವಾತಂತ್ರ್ಯೋತ್ಸವದ ಶುಭ ಹಾರೈಕೆಗಳು. ಜುಲೈ ೪ ನಮ್ಮ ಕ್ರಿಯಾಭೂಮಿಯಲ್ಲಿ ಸಡಗರ, ಆಗಸ್ಟ್ ೧೫ ನಮ್ಮ ಮಾತೃ ಭೂಮಿಯಲ್ಲಿ ಅದೇ ಸಡಗರ. ಭೂಮಿ ಬೇರೆಯಾದರೂ ಭಾವ ಒಂದೇ, ಬಂಧನದಿಂದ ಬಿಡುಗಡೆ. ಎಷ್ಟು ನಿರಾಳ!

ಶ್ರೀರಂಗರ ಶೋಕಚಕ್ರ ನಾಟಕದಲ್ಲಿ ಒಂದು ಮಾತಿದೆ. ಹೆಚ್ಚುತ್ತಿರುವ ಭ್ರಷ್ಟಾಚಾರದಿಂದ ಬೇಸತ್ತ ಪಾತ್ರಧಾರಿಯೊಬ್ಬನ ಮನೋವ್ಯಥೆ; "ಸ್ವಾತಂತ್ರ್ಯ ಸಿಕ್ತು ಅನ್ನಕ್ಕೆ ಅದೇನು ಶಾಲಾ ಹುಡುಗನಿಗೆ ಹಾದೀಲಿ ಸಿಗೋ ವಸ್ತುವೇ? ಸ್ವಾತಂತ್ರ್ಯ ಗಳಿಸಿದ್ದು ಎನ್ನು". ನಮಗೆ ಸಿಕ್ಕಿದ್ದಕ್ಕಿಂತ , ನಾವು ಗಳಿಸಿದ್ದರ ಬೆಲೆ ಹೆಚ್ಚು ಎನ್ನುವುದು ನಾವೆಲ್ಲರೂ ಅರಿತಿರುವ ಸತ್ಯ. ಹೆಚ್ಚು ಕಮ್ಮಿ ೩೦-೪೦ ವರ್ಷಗಳ ಹಿಂದೆ ಬರೆದ ನಾಟಕ ಇನ್ನೂ ಪ್ರಸ್ತುತ ಆಗಿರೋದು ನಮ್ಮ ಭಾರತ ದೇಶದ ದುರಂತವೇ ಸರಿ.



ಈ ಸಂಚಿಕೆಯ ಸಂಭ್ರಮ ಏನೆಂದರೆ, ಹತ್ತು ಹಲವಾರು ಲೇಖನಗಳು. ಕೆಲವು ಸಂಘದ ಸದಸ್ಯರದು, ಹಲವು ಇಲ್ಲಿ ಬಂದಿರುವ ಹಿರಿಯರದು. ಎಲ್ಲರೂ ಉತ್ಸಾಹದಿಂದ ಬರೆದಿದ್ದಾರೆ. ಓದಿ, ಮೆಚ್ಚಿಕೆಯಾದರೆ ಹೇಳಿ. ನಿಮ್ಮ ಪ್ರೋತ್ಸಾಹ, ಬೆಂಬಲ ಕಂಪುವಿನ ಜೀವನಾಡಿ.

ಶುಭ ಹಾರೈಕೆಗಳೊಂದಿಗೆ
ಪೂರ್ಣಿಮ ಸುಬ್ರಹ್ಮಣ್ಯ.

**Where liberty dwells, there is my country. ~Benjamin Franklin**

## ನಾನು ನೋಡಿದ ಬೃಂದಾವನ

- ಈಕ್ಷಾ ಅನಿಲ್



ನಾನು ನೋಡಿದ ಬೃಂದಾವನ

December 2011-ನಾನು ಮತ್ತು ನನ್ನ ತಮ್ಮ, ನಮ್ಮ ತಂದೆ ತಾಯಿಯ ಜೊತೆ ಮೈಸೂರು ನಗರ ನೋಡಲು ಹೋಗಿದ್ದೇವು. ಅಲ್ಲಿ ಒಂದು ಸುಂದರವಾದ ತೋಟ ನೋಡಲು ಹೋದೆವು. ಟಿಕೆಟ್ ತೆಗೆದುಕೊಂಡು ತೋಟದ ಒಳಗೆ ಹೋದೆವು. ಬಣ್ಣ ಬಣ್ಣದ, ವಿದ ವಿದ ವಾದ ಹೂವುಗಳು ನೋಡಲು ತುಂಬಾ ಚೆನ್ನಾಗಿತ್ತು. ಅಲ್ಲಿಯ water fountain ಕೂಡ ನನಗೆ ಇಷ್ಟ ಆಯಿತು. ಇಷ್ಟೇ ಅಲ್ಲ, ಇನ್ನೊಂದು surprise ಕೂಡ ಇತ್ತು. ಅದನ್ನು ನೋಡಲು ನಾವು ದೋಣಿಯಲ್ಲಿ ಹೋದೆವು. ಹಾಗೆ ಅಲ್ಲಿ ಒಂದು Dam ಕೂಡ ನೋಡಿದೆವು. ಆಮೇಲೆ ಆ surprise ನೋಡಲು ಸಿಕ್ಕಿತು. ಅದೇನೆಂದರೆ- Musical Fountain. ಅಬ್ಬ! ತುಂಬಾ ಚೆನ್ನಾಗಿತ್ತು. ಎಷ್ಟು ಖುಷಿ ಆಯಿತು ಗೊತ್ತ? ಬೇರೆ ಬೇರೆ ಹಾಡುಗಳಿಗೆ dance ಮಾಡುವ fountain. ತುಂಬಾ ಮಜಾ ಮಾಡಿ ಹೊರಟೆವು. Oh! ಆ ತೋಟದ ಹೆಸರು Brindavan gardens ಮತ್ತೆ ಆ dam ಹೆಸರು K.R.S-ಕೃಷ್ಣ ರಾಜ ಸಾಗರ dam. ಎಲ್ಲರೂ ನೋಡ ಬೇಕಾದ ಜಾಗ ಇದು, ನಾನು ನೋಡಿದ ಬೃಂದಾವನ.





- ಈಕ್ಷಾ ಅನಿಲ್

Give me blood and I will give you freedom - Subhash Chandra Bose

# ಪಾದರಕ್ಷೆಗಳು.... ಅದಲು ಬದಲಾದಾಗ

– ವನಜಾ ರಾಜನ್





"**ಪಾ**ದರಕ್ಷೆ"ಗಳನ್ನು ಬಹಳ ಹಿಂದಿನ ಕಾಲದಿಂದಲೂ ಬಳಕೆ ಮಾಡುತ್ತಿದ್ದುದರ ಬಗ್ಗೆ ವೇದ "ಪುರಾಣ" "ರಾಮಾಯಣ", "ಮಹಾಭಾರತ"ಗಳೇ ಮುಂತಾದ ಪುರಾಣ ಪುಣ್ಯ ಕಥೆಗಳಲ್ಲಿ ಉಲ್ಲೇಖವಿದೆ. ಇವುಗಳು ಬಹಳ ಪುರಾತನವಾದ "ತೊಡುಗೆ" ಎಂದು ಹೇಳಿದರೂ ಸಹ ತಪ್ಪಾಗಲಾರದು ! ರಾಮಾಯಣದ ಆಯೋಧ್ಯಕಾಂಡದಲ್ಲಿ ಬರುವ "ಪಾದುಕಾ ಪಟ್ಟಾಭಿಷೇಕ"ದ ಪ್ರಸಂಗ ಎಲ್ಲರಿಗೂ ತಿಳಿದಿರುವಂತೆ ಬಹಳ ಪ್ರಮುಖವಾದದ್ದು ! ಭರತ, ಶತ್ರುಘ್ನ ರಾಮ ವನವಾಸಕ್ಕೆ ತೆರಳಿದ ನಂತರ, ರಾಜ್ಯ - ರಾಜ್ಯಾಭಾರದಲ್ಲಿ ಆಸಕ್ತಿ ಇರಿಸದೆ, ರಾಮನನ್ನು ಓಲೈಸಿ ಮರಳಿ ಅಯೋಧ್ಯಗೆ ಕರೆತರುವುದಕ್ಕಾಗಿ ಚಿತ್ರಕೂಟಕ್ಕೆ ಪ್ರಯಾಣ ಬೆಳೆಸಿದರು.  ಭರತನೇ ಮೊದಲಾದವರೆಲ್ಲರೂ ಅಂಗಲಾಚಿ ಬೇಡಿದರೂ ಒಪ್ಪದ ಶ್ರೀರಾಮನು "ಪಿತೃವಾಕ್ಯ ಪರಿಪಾಲನೆಯೇ" ತನ್ನ ಧರ್ಮವೆಂದು ವಾದ ಮಾಡಿ ಕೊನೆಗೆ ಶ್ರೀರಾಮನ ಪವಿತ್ರವಾದ ಪಾದುಕೆಗಳನ್ನು ಭರತನು ಶಿರದ ಮೇಲೆ ಹೊತ್ತು ಅಯೋಧ್ಯೆಯ ಹೊರವಲಯದಲ್ಲಿದ್ದ "ನಂದಿಗ್ರಾಮ"ದಲ್ಲಿ, ಸಿಂಹಾಸನದ ಮೇಲೆ ಪ್ರತಿಷ್ಠಾಪಿಸಿ, ಶ್ರೀರಾಮನು ನ್ಯಾಸ ರೂಪದಲ್ಲಿರಿಸಿದ್ದ ರಾಜ್ಯ ಭಾರವನ್ನು ನಿರ್ವಹಿಸಿದನು. ಒಬ್ಬ ಆದರ್ಶ ರಾಜ, "ಆದರ್ಶ ತಮ್ಮ"ನ ಕಥೆಯಾಯಿತು. ಇದು ಇಂದಿಗೂ ಆದರ್ಶವಾಗಿಯೇ ಉಳಿದ ಧರ್ಮವೆನಿಸಿದೆ.

"ತ್ರೇತಾಯುಗ" ಕಾಲದಲ್ಲಿ ಮರದಿಂದ ಮಾಡಲ್ಪಟ್ಟ ಪಾದುಕೆಗಳನ್ನು ತೊಡುತ್ತಿದ್ದರು. ಪಾದದ ಅಳತೆ ಆಕಾರಕ್ಕೆ ಮಾಡಲ್ಪಟ್ಟ ಮರದ ಹಲಗೆಯ ಮೇಲೆ, 1-1.5 ಇಂಚಿನ ಕಂಬದ ರೀತಿಯ ಮರದ ತುಂಡನ್ನು ಎರಡು ಕಾಲ್ಬೆರಳುಗಳ ನಡುವೆ ಸಿಕ್ಕಿಸಿಕೊಂಡು ನಡೆದಾಡುತ್ತಿದ್ದರು. ಬಹಳ ಅಭ್ಯಾಸಬೇಕು. ಹೆಜ್ಜೆ ಎತ್ತಿಡಬೇಕಾದರೆ ಎಷ್ಟು ಭಾರ ಕಾಲಿಗೆ ! ನಿಜವಾಗಿ ಕಷ್ಟಕರವಾದ ಕೆಲಸವೆಂದೇ ನನ್ನ ಅನಿಸಿಕೆ ! ಪಾಪ ! ಹಿಂದಿನ ಕಾಲದಲ್ಲಿ ಋಷಿ - ಮುನಿಗಳು ಇಷ್ಟೊಂದು ಭಾರದ ಮೆಟ್ಟುಗಳನ್ನು ಧರಿಸಿ ತ್ರಿಲೋಕ ಸಂಚಾರ ಹೇಗೆ ಕೈಗೊಳ್ಳುತ್ತಿದ್ದರೋ ಏನೋ ಆ ಪರಮಾತ್ಮನೇ ಬಲ್ಲ ! ಈಗಲೂ, ಹಲವು ಮಠಾಧಿಪತಿಗಳು, ಸ್ವಾಮೀಜಿಗಳು ಈ ಬಗೆಯ ಪಾದರಕ್ಷೆಗಳನ್ನು ತೊಡುವುದನ್ನು ನಾನು ನೋಡಿದ್ದೇನೆ. ಈಗಿನ ಮಾತು ಬಿಡಿ ! ಇವರೆಲ್ಲರಿಗೂ ವಾಹನಗಳ ಸೌಲಭ್ಯವಿರುವುದರಿಂದ ಹೆಚ್ಚು ಕಾಲ್ನಡಿಗೆಯ ಶ್ರಮ ಪಡಬೇಕಾಗಿಲ್ಲ ! ಅಂದು ಋಷಿಗಳು, ಅಷ್ಟು ದೂರದಲ್ಲಿ ನಡೆದು ಬರುತ್ತಿರುವಾಗಲೇ `ಟಕ್ - ಟಕ್' ಎಂಬ ಅವರ ಮೆಟ್ಟಿನ ಶಬ್ದ ಕೇಳಿ ಬರುತ್ತಿತ್ತು. ಇದೂ ಸಹ ಒಂದು ವಿಧದಲ್ಲಿ ಅನುಕೂಲಕರವಾಗಿತ್ತು ಎನ್ನಬಹುದು ! ಮುನಿವರ್ಯರುಗಳ ಅತಿಥ್ಯಕ್ಕೆ ಸಮಯಾವಕಾಶ ದೊರಕುತ್ತಿತ್ತು. ಅವರು ಅರಮನೆಯ ಒಳಗೆ ಬರುವಾಗಲೇ, ಸಭಾಸದರು ಎದ್ದು ನಿಂತು ನಮಸ್ಕಾರ ಮಾಡಿ, ರಾಜನು ಅರ್ಘಪಾದ್ಯಾದಿಗಳನ್ನು ನೀಡಿ ಸತ್ಕರಿಸಿ, ನಂತರವೇ ನಿಧಾನವಾಗಿ ಉಭಯ ಕುಶಲೋಪರಿ ವಿಚಾರಿಸಿ ತಿಳಿಯಬೇಕಾಗಿತ್ತು. ಈ ಕ್ರಮಬದ್ಧ ಆಚರಣೆಯಲ್ಲಿ ಏರುಪೇರಾದರೋ ದೇವರೇ ಗತಿ ! ವಿಶ್ವಾಮಿತ್ರ, ದೂರ್ವಾಸ ಮುನಿಗಳಿಗಂತೂ ಮೂಗಿನ ತುದಿಯಲ್ಲೇ ಕೋಪ ! ಅವರ ಕೋಪದ ತಾಪ ತಟ್ಟಿದರೆ ಕೆಲಸ ಕೆಟ್ಟಂತೆ ! ಆ ಕೂಡಲೇ ಶಾಪ ಕೊಡುತ್ತಿದ್ದರು ರಾಜನಾದವನಿಗೆ ಮುನಿವರ್ಯನ ಮುನಿಸನ್ನು ಶಾಂತಗೊಳಿಸಿ ಶಾಪ ವಿಮೋಚನೆಯ ಮಾರ್ಗವನ್ನು ಕೋರಿ ಕಂಡುಕೊಳ್ಳುವುದರಲ್ಲಿ ಸಾಕೋ ಸಾಕಾಗಿ ಹೋಗುತ್ತಿತ್ತು !

ಇದು ವೇದ ಉಪನಿಷತ್, ರಾಮಾಯಣ, ಮಹಾಭಾರತ ಭಾಗವತದ ಕಾಲವಾಯಿತು ಎಂದು ಭಾವಿಸೋಣ. ಅಲ್ಲಿಂದಿತ್ತೀಚೆಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಬದಲಾವಣೆಯ ಗಾಳಿ ಬೀಸಿದಂತೆ ಪಾದರಕ್ಷೆಗಳ ತಯಾರಿಕೆಯಲ್ಲೂ ಅನೇಕ ಮಾಪರ್ಾಡುಗಳಾಗಿವೆ. ಹದ ಮಾಡಿದ ಚರ್ಮ ಅಥವಾ ಚಕ್ಕಳದಿಂದ ಅಷ್ಟೇ ಏಕೆ ಪ್ಲಾಸ್ಟಿಕ್ಕಿಂದ ಕೂಡ ಪಾದರಕ್ಷೆಗಳನ್ನು ತಯಾರಿಸುತ್ತಾರೆ. ಎಷ್ಟೊಂದು ವಿನ್ಯಾಸ, ವೈವಿಧ್ಯತೆ ! ಕೆಲವು ಜೋಡಿನ ಅಟ್ಟೆ  ನೆಲಸಮವಾಗಿದ್ದು ಪಾದಗಳಿಗೆ ಅಂಟಿಕೊಂಡಂತೆ ಅಡ್ಡಾಡಲು ಅನುಕೂಲವಾಗಿರುತ್ತದೆ. ಕೆಲವು ಹಿಮ್ಮಡಿಗಳು ನೆಲದಿಂದ 2-3 ಇಂಚು ಎತ್ತರಕ್ಕಿದ್ದು ಧರಿಸುವವಳ, ಎತ್ತರ ಹೆಚ್ಚಿಸುವುದೇ ಅಲ್ಲದೆ ಅವಳ ನಡಿಗೆಗೆ ಒಂದು ರೀತಿಯ ಸೊಬಗು, ಲಾಸ್ಯ, ಆಕರ್ಷಣೆ ಉಂಟು ಮಾಡುತ್ತದೆ. ಹಿಂದೆ ಕವಿಗಳು ಹೆಣ್ಣಿನ ನಡಿಗೆಗೆ ಮಾರುಹೋಗಿ ಅವಳನ್ನು `ಗಜಗಮನೆ', `ಹಂಸ ಗಮನೆ' ಎಂಬ ಪದಾಲಂಕಾರಗಳನ್ನು ಬಳಸಿ ವರ್ಣನೆ ಮಾಡುತ್ತಿದ್ದರು. ಇವೆಲ್ಲಾ ಈಗಿನ ಕಾಲಕ್ಕೆ ಹಳೆಯ ಹೋಲಿಕೆಗಳೆನಿಸಿದರೆ ಆಶ್ಚರ್ಯವೇನಿಲ್ಲ !

ವಿದೇಶಿಯರು ನಮ್ಮ ದೇಶವನ್ನು ನಾವೇ ಆಳಲು ಬಿಟ್ಟು ಹೋಗಿ ಅರ್ಧಶತಮಾನವಾದರೂ ಅವರ ಕೆಲವು ನಡೆವಳಿಕೆ ರೀತಿ - ನೀತಿ, ಉಡುಗೆ ತೊಡುಗೆಗಳಿಗೆ ನಾವು ಇನ್ನೂ ಅಂಟಿಕೊಂಡಿಯೇ ಇದ್ದೇವೆ. ಅವರ "ಸೂಟು - ಬೂಟು - ಟೈ ಸಂಸ್ಕೃತಿ" ನಮ್ಮ ದೇಶದ ಹವಾಮಾನಕ್ಕೆ ಹೊಂದುವುದೇ ? ನಮ್ಮ ಚಪ್ಪಲಿಗಳು ಧರಿಸಲು ಹಾಗೂ ಕಳಚಲು ಕಷ್ಟವೇ ಇಲ್ಲ. ಅಲ್ಲವೇ ? ದೇವಸ್ಥಾನಗಳಿಗೆ, ಮದುವೆ-ಮುಂಜಿ, ಪೂಜೆ - ಪುನಸ್ಕಾರಗಳಿಗೆ ಹೋದಾಗ ನಾವು ಪಾದರಕ್ಷೆಗಳನ್ನು ಹೊರಗಡೆಯೇ ಬಿಟ್ಟು ಸಭಾಂಗಣಗಳಿಗೆ ಪ್ರವೇಶ ಮಾಡುವುದು ಪರಂಪರಾಗತವಾಗಿ ಬಂದಿರುವ ಪದ್ಧತಿ ಎಂದು ನಮ್ಮೆಲ್ಲರಿಗೂ ತಿಳಿದ ವಿಷಯವೇ ಸರಿ ! ಇತ್ತೀಚೆಗೆ ದೇವಸ್ಥಾನಗಳ ಹೊರಗಡೆ ಭಕ್ತಾದಿಗಳು ಕಳಚಿ ಬಿಟ್ಟಿರುವ ಜೋಡುಗಳನ್ನು ನೋಡಿಕೊಳ್ಳಲು, ಅಂದರೆ ಪಾದರಕ್ಷೆಗಳು ಕಳೆದು ಹೋಗದಂತೆ ರಕ್ಷಣೆ ಮಾಡಲು ವ್ಯವಸ್ಥೆ ಮಾಡಿರುತ್ತಾರೆ, ಆ ಸೇವೆಗಾಗಿ ನಾವು ಸ್ವಲ್ಪ ಹಣ ನೀಡಬೇಕಷ್ಟೇ. ಈ ಏರ್ಪಾಡು ಜಾರಿಗೆ ಬರುವ ಮೊದಲು, ನಮ್ಮ - ನಮ್ಮ ಜೋಡುಗಳ ಜವಾಬ್ದಾರಿ ನಾವೇ ಸ್ವತಃ ತೆಗೆದುಕೊಳ್ಳುತ್ತಿದ್ದ ಕಾಲದಲ್ಲಿ, ಮನ ನೆಮ್ಮದಿ ಅರಸಿ ದೇವರ ಸನ್ನಿಧಿಗೆ ಬಂದಾಗಲೂ ನಮ್ಮ ಮನ ಭಗವಂತನಲ್ಲಿ ನೆಲೆಸುವ ಬದಲಾಗಿ, ನಮ್ಮ ದೃಷ್ಟಿ ಹೊರಗೆ ಕಳಚಿಬಿಟ್ಟಿರುವ ಕಾಲಿನ ಜೋಡುಗಳ ಮೇಲೆ ಜಾರಿ ಹೋಗುತ್ತಿದ್ದ ಅನುಭವ ನಮಗೆ, ನಿಮಗೆ, ಏನು ಎಲ್ಲರಿಗೂ ಒಮ್ಮೆಯಾದರೂ ಆಗಿದೆ. ಆದರೆ ಈಗ ಸಧ್ಯ ನೆಮ್ಮದಿ ಸಿಕ್ಕಿದೆ. ಮದುವೆ - ಮುಂಜಿ, ಮಂಗಳ ಕಾರ್ಯಕ್ಕೆ ಹೋದಾಗ ಈ ಮೊದಲು, ಈ ರೀತಿಯ ಅನುಕೂಲ ಲಭ್ಯವಿಲ್ಲದೆ ಪಾದರಕ್ಷೆಗಳನ್ನು ಕಳೆದುಕೊಂಡು ಪರದಾಡಿದ್ದು ನನಗೇ ಎಷ್ಟೋ ಬಾರಿ ಅನುಭವಕ್ಕೆ ಬಂದಿದೆ. ಪಾದರಕ್ಷೆಗಳು ಪಾದಗಳನ್ನು ಬಿಟ್ಟು ಹೋದ ಮೇಲೆ ಜೇಬಿನಿಂದ ಹಣ ಹೊರಟು ಹೋಗುವುದರಲ್ಲಿ ಎಷ್ಟು ಮಹಾ ಸಮಯ ಆಗುತ್ತದೆ ? ಯಾಕೆಂದರೆ ಇಂತಹ ಸನ್ನಿವೇಶವನ್ನು "ತುರ್ತು ಪರಿಸ್ಥಿತಿ " ಎಂದೇ ವರ್ಣಿಸಿ ಹೇಳಬಹುದು. ಇತ್ತೀಚೆಗೆ ಮದುವೆ ಮನೆಗಳಿಗೆ ಹೋದವರು ತಮ್ಮ ಎರಡು ಕಾಲಿನ ಚಪ್ಪಲಿಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಬಿಟ್ಟು, ಚಪ್ಪಲಿ ಚೋರರನ್ನು ಗಲಿಬಿಲಿಗೀಡು ಮಾಡಿದ್ದಾರೆಂದು ಕೇಳಿದ್ದೇನೆ. ಈ ಉಪಾಯ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆಯೋ ಯಾರಿಗೆ ಗೊತ್ತು ? ಮರೆವು ಕಾಯಿಲೆ ಇದ್ದದ್ದಾದರೆ ಮತ್ತಷ್ಟು ಮನಃಕ್ಲೇಶ. ಆ ಗಲಾಟೆಗದ್ದಲದಲ್ಲಿ ಚಪ್ಪಲಿ ಇರಿಸಿದ ಜಾಗಗಳನ್ನು ಮರೆತರೆ ಏನು ಗತಿ ! ಬಹಳ ಬಾರಿ ಚಪ್ಪಲಿ ಕಳೆದುಕೊಂಡವರ ಸೋತ ಮುಖ ಪೆಚ್ಚು ಮುಖ ನೋಡಿ ಅವರ ಸಮಾಧಾನಕ್ಕಾಗಿ ಹಲವರು ಹೇಳುವುದುಂಟು. "ಚಿಂತೆ ಮಾಡ್ಬೇಡ, ನಿನ್ನ ಮೇಲಿನ ಪೀಡೆ ಪರಿಹಾರವಾಯ್ತು" (ಗ್ರಹಚಾರ), ಪಾದರಕ್ಷೆಗಳಂತೂ ಹೋಯ್ತು. ಅದರಲ್ಲಿದ್ದ (?) ಪೀಡೆ, ಪರಿಹಾರವಾಯ್ತೋ ಇಲ್ಲವೋ ಯಾರಿಗೆ ಗೊತ್ತು ? ಪಾದರಕ್ಷೆಗಳನ್ನು ಧರಿಸದೆಯೇ ಪಟ್ಟಣಗಳ ರಸ್ತೆಗಳಲ್ಲಿ ಪಾದಚಾರಿಗಳಾಗಿ ನಡೆದಾಡಲು ಸಾಧ್ಯವೇ ? ತಂಬಾಕು - ತಾಂಬೂಲ ಮಿಶ್ರಿತ ಉಗುಳಿನ ಸಿಂಪಣೆ ರಸ್ತೆಗಳಲ್ಲೆಲ್ಲಾ ಆಗಿರುವಾಗ, ಅದರಲ್ಲಿ ವೈರಸ್, ಬ್ಯಾಕ್ಟೀರಿಯಾ ಬೀಡು ಬಿಟ್ಟಿರುವಾಗ ಚಪ್ಪಲಿ, ಇಲ್ಲದೆ ಬರೀಕಾಲಿನಲ್ಲಿ ನಡೆಯಲು ಮನಸ್ಸಾಗುವುದೇ ? ದೇಹಾರೋಗ್ಯ ಏನಾಗಬಹುದು ? ಮಳೆಗಾಲದ ನಂತರ ನಮ್ಮ ರಸ್ತೆಗಳಲ್ಲಿ ಕಂಡು ಬರುವ, ಕೊಳಚೆ ನೀರು ತುಂಬಿರುವ ಹಳ್ಳ - ಕೊಳ್ಳಗಳು ಎಷ್ಟೊಂದು ! ಟಾರು ಕೊಚ್ಚಿಹೋಗಿ ರಸ್ತೆಗಳಲ್ಲಿ ಉಳಿದ ಕಲ್ಲುಗಳ ಮೇಲೆ ಕಾಲಿಡಲು ಆಗುವುದೇ ? ಒಂದೇ - ಎರಡೇ, ಹೆಜ್ಜೆ - ಹೆಜ್ಜೆಗೂ ಅಪಾಯಗಳು ಅಡಗಿಕೊಂಡಿರುವ ರಸ್ತೆಗಳಲ್ಲಿ ಬರೀ ಕಾಲಿನಲ್ಲಿ, ಚಪ್ಪಲಿ ರಹಿತವಾಗಿ ಓಡಾಡಲು ಸಾಧ್ಯವೇ ಇಲ್ಲ. ಪಟ್ಟಣಗಳಾಗಲೀ, ಹಳ್ಳಿಯಾಗಲೀ ಪಾದಗಳಿಗೆ ಪಾದರಕ್ಷೆಗಳ ರಕ್ಷಣೆ ಅತ್ಯವಶ್ಯಕ !

ಇತ್ತೀಚೆಗೆ, ನಮ್ಮ ಕನ್ನಡ ಸಂಘದಲ್ಲಿ ಜರುಗಿದ ಒಂದು ಸಂಭ್ರಮದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ದೂರದ (ಮುಂಬಯಿ) "ಥಾನೆ"ಯಿಂದ ಒಬ್ಬ ಆಹ್ವಾನಿತರು ಬಂದಿದ್ದರು. ಸಭೆ ಮುಗಿದ ಮೇಲೆ ಅವರು ಅವಸರದಲ್ಲಿ ಒಂದು ಕಾಲಿಗೆ ಇನ್ನೊಬ್ಬರ ಪಾದರಕ್ಷೆ ಧರಿಸಿ ಮನೆ ಮುಟ್ಟಿಯೂ ಆಯಿತು. ಕಾಲಿನಿಂದ ಕಳಚುವಾಗ ನೋಡಿ ಹೌಹಾರಿದರು ! ಇದೇನು ? ಒಂದು ತನ್ನದೇ ಹೊಸ ಚಪ್ಪಲಿ, ಮತ್ತೊಂದು ಕಾಲಿಗೆ ಬೇರೆ ಬಣ್ಣದ, ಬೇರೆ ವಿನ್ಯಾಸದ ಪಾದರಕ್ಷೆ ! ಈ ಅಚಾತುರ್ಯ ಹೇಗಾಯಿತು ? ಚಪ್ಪಲಿಗಳನ್ನು ಧರಿಸುವಾಗ ತಲೆ ಬಗ್ಗಿ ಪಾದಗಳ ಕಡೆ ಗಮನಹರಿಸಲು ಮರೆತೆನೆ ? ಒಂದು ಜೋಡನ್ನು ತೊಡುವಾಗ ಬಿಗಿಯಾಗಿದೆಯೆಂದೆನಿಸಿದರೂ ಒಂದೆರಡು ಗಂಟೆಗಳ ಕಾಲ, ಒಂದೆಡೆಯಲ್ಲೇ ಕುಳಿತಿದ್ದೆನಾದ್ದರಿಂದ ಕಾಲು ಭಾರವಾಗಿ ಬಿಗಿಯಾಗಿರಬಹುದೆಂದು ಊಹೆ ಮಾಡಿದ್ದು ತಪ್ಪಾಯಿತೇ ? ಸಮಾರಂಭ ನೋಡಿ ನಲಿದು, ಮನೆಗೆ ಹೋದ ಕೂಡಲೇ ತಮ್ಮ ಸಮಸ್ಯೆಯನ್ನು ನನ್ನಲ್ಲಿ ಹೇಳಿಕೊಂಡಿದುದೇ ಈ ಲೇಖನಕ್ಕೆ ಸ್ಫೂರ್ತಿಯಾಯಿತು. ಅವರು ಧರಿಸಿದ ಮತ್ತೊಬ್ಬರ ಜೋಡನ್ನು ಅದರ ಒಡತಿಗೆ ಹೇಗೆ ಹಿಂತಿರುಗಿಸುವುದು, ಎಂಬುದೇ ಇಲ್ಲಿ ದೊಡ್ಡ ಸಮಸ್ಯೆ ! ಆ ಮತ್ತೊಬ್ಬರು ಸಹ ತಮ್ಮ ಒಂದು ಕಾಲಿಗೆ ತನ್ನ ಸ್ವಂತ ಚಪ್ಪಲಿ ಕಾಣದೆ ಥಾನೆ ಯವರ ಒಂದು ಕಾಲಿನ ಚಪ್ಪಲಿ ಧರಿಸಿ ಮನೆಗೆ ಹೋದರೆ ? ಅಥವಾ ಮತ್ತೊಂದು ಕಾಲಿನ ಚಪ್ಪಲಿ ಹುಡುಕಿ, ಸಿಗದೆ ಒಂದೇ ಒಂದು ಚಪ್ಪಲಿ ಹಾಕಿಕೊಂಡು ಹೋದರೆ ? ಇಲ್ಲ, ಅದು ಸಾಧ್ಯವೇ ಇಲ್ಲ ! ಬಿಡಿ, ಆ ಒಂದು ಚಪ್ಪಲಿಯನ್ನು ಅಲ್ಲಿಯೇ ಬಿಟ್ಟು ಬರಿಗಾಲಿನಲ್ಲಿ ಮನೆಗೆ ಹೋದರೆ ? ಪಾಪ ! ಅವರಿಗೇನು ಗೊತ್ತು. ತಮ್ಮ ಮತ್ತೊಂದು ಕಾಲಿನ ಚಪ್ಪಲಿ, ಇನ್ನೊಬ್ಬರ ಕಾಲಿಗೆ ಸೇರಿ, `ಥಾನೆ'ಗೆ ತಲುಪಿದೆ ಎಂಬ ವಿಷಯ. "ಜೋಡು"ಗಳ ಜೋಡಿ ಅವರದವರಿಗೆ ದೊರೆಯಿತೆ ? ಸಮಸ್ಯೆಗಳು ಸುಲಲಿತವಾಗಿ ಬಗೆ ಹರಿದವೆ ? ಪಾದರಕ್ಷೆಗಳು ಅದಲು - ಬದಲು ಆದರೆ ಹೀಗೆಯೇ ಆಗುವುದಲ್ಲವೇ ? `ಅದಲು - ಬದಲು' ಹತ್ತಾರು ಬಾರಿ, ಬೇಗ-ಬೇಗ ಪುನರಾವೃತ್ತಿ ಮಾಡುವಾಗಲೇ ನಾಲಿಗೆ ತೊದಲಿ ಬದಲು, ಅದಲಾಗಬಹುದು. ಅಲ್ಲವೇ ಪ್ರಯತ್ನಿಸಿ, ಪರಿಹಾರ ಸೂಚಿಸಿ ಎಂದು ಕೋರುವ ವನಜಾರಾಜನ್.

**Freedom is nothing but a chance to be better. ~Albert Camus**

# ಕುಬ್ಜ ಮರಗಳು

- ರವಿ ಶರ್ಮ



**ಮೊ**ನ್ನೆ ಮಾರ್ಚ್ ಮೊದಲನೇ ವಾರದಲ್ಲಿ ಬಹಳ ಓಡಾಟ. ಯಾಕಪ್ಪಾ ಅಂದರೆ ನಮ್ಮ ಹತ್ತಿರದ ಸಸ್ಯಕಾಶಿಯಲ್ಲಿ, ಡಲ್ಲಾಸ್ ನಗರದ Arboretumನಲ್ಲಿ, ಪ್ರತಿ ವರ್ಷದಂತೆ ಪುಷ್ಪ ಪ್ರದರ್ಶನವಿತ್ತು. ಆ ಪ್ರದರ್ಶನದಲ್ಲಿ ನಮ್ಮ Dallas Bonsai Clubಗೆ ಭಾಗವಹಿಸಲು ಅಹ್ವಾನ ಬಂದಿತ್ತು, ಪ್ರತಿ ವರ್ಷದಂತೆ. ಗಡಿಬಿಡಿಗೆ ಕಾರಣ ವಾತವರಣ ಬೇಗ ಬಿಸಿಯಾದ್ದರಿಂದ, ಕಾರ್ಯಕ್ರಮ ಒಂದು ವಾರ ಮುಂಚೆ ಬಂದಿತ್ತು. ಗೆಡ್ಡೆಗಳಿಂದ ಬರುವ ಹೂಗಳು ಪ್ರದರ್ಶನಕ್ಕೆ ತಯಾರಾಗಿ ಬಿಟ್ಟಿದ್ದವು. ಆದರೆ ನಮ್ಮ ಚಿಕ್ಕ ಮರಗಳು ಇನ್ನೂ ಚಳಿಗಾಲದ ನಿದ್ದೆಯಿಂದ ಏಳಲು ಆತುರ ತೋರಿಸುತ್ತಿರಲಿಲ್ಲ. ಹೀಗಾಗಿ ಯಾವ ಮರಗಳು ಪ್ರದರ್ಶನ ಯೋಗ್ಯ ಎಂಬುದು ನಮ್ಮ ಕ್ಲಬ್ನ ಎಲ್ಲರಿಗೂ ಪ್ರಶ್ನೆಯಾಗಿತ್ತು. ಕೊನೆಗೆ ನಮಗೆ ಬೇಕಾಗಿದ್ದಕ್ಕಿಂತ ಜಾಸ್ತಿನೇ ಮರಗಳು ಸಿಕ್ಕಿದವು ಅನ್ನೀ .

ಏನಿದು ಚಿಕ್ಕಮರಗಳು ಅನ್ನುತ್ತೀರ? ಅದು bonsai ಪದದ ಕನ್ನಡ ಅನುವಾದ. Bonsai ಅನ್ನುವುದು ಜಪಾನ್ ಭಾಷೆಯ ಪದ. Potted Tree ಅನ್ನುವುದು ಇದರ english ಭಾಷಾಂತರ. ಕನ್ನಡ online dictionary ಪ್ರಕಾರ ಇದಕ್ಕೆ 'ಕುಬ್ಜ ಮರ' ಅಂತಲೂ ಕರೆಯುತ್ತಾರೆ. ಏನೇ ಕರೆದರೂ ಆ ದೊಡ್ಡ ವೃಕ್ಷಗಳ ಸೌಂದರ್ಯ ಈ ಚಿಕ್ಕಮರಗಳಲ್ಲಿ ಅಡಗಿವೆ.

ಬೆಂಗಳೂರಿನ Lalbagh ನಲ್ಲಿ ಒಂದು Bonsai ಗಾರ್ಡನ್ ಮಾಡುತ್ತಿದ್ದಾರೆ ಅಂತ ಸುದ್ದಿ. ಕಳೆದಬಾರಿಗೆ ಅಲ್ಲಿ ಹೋದಾಗ ಕೆಲಸ ಶುರು ಮಾಡಿದ್ದರು. ಮೈಸೂರಿನ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಆಶ್ರಮದಲ್ಲಿ ಪ್ರಖ್ಯಾತಿಯಾದ ಉದ್ಯಾನವಿದೆ. ಅಲ್ಲಿಗೆ ಹೋದರೆ ನೋಡಲು ಮರೆಯದಿರಿ. ನಿಮಗೆ ಗೊತ್ತಿರುವ ಮರಗಳೂ, ದೇಶ ವಿದೇಶಗಳಿಂದ ತಂದಿರುವ ಮರಗಳೂ ಅಲ್ಲಿವೆ.

ನಾನು 1990 - 1991 ಕಾಲದಲ್ಲಿ ಡೆಲ್ಲಿ ನಗರದಲ್ಲಿ ಇದ್ದಾಗ Bonsai ಬಗ್ಗೆ ಒಂದು ಪುಸ್ತಕ ಕೊಂಡಿದ್ದೆ. ಜ್ಯೋತಿ ಮತ್ತು ನಿಕುಂಜ್ ಪಾರೆಖ್ ಅನ್ನುವರು ಬರೆದಿದ್ದರು. ನಮ್ಮ ದೇಶದಲ್ಲಿ ಈ ಹವ್ಯಾಸದಲ್ಲಿ ಪ್ರಖ್ಯಾತಿ ಅವರಿಗಿದೆ.ನನ್ನ ಮೊದಲ ಮರಗಳು ಪುಸ್ತಕದ ಚಿತ್ರಗಳಂತೆ ಬರೀ two dimensional ಆಗಿದ್ದವು. ಅಮೆರಿಕಾಗೆ ಬಂದ ಮೇಲೆ ಇಲ್ಲಿಯ ಪುಸ್ತಕಗಳಿಂದ ಬಹಳಷ್ಟು ಕಲಿತೆ. ಆದರೂ ಜನರ ಸಂಗತಿಯಿಂದ ಕಲಿಯುವುದು ಬಹಳ ಪರಿಣಾಮಕಾರಿ. ನಮ್ಮ ಡಲ್ಲಾಸ್ ನಗರದಲ್ಲೂ ಇದಕ್ಕಾಗಿ ಒಂದು ಸಂಘವಿದೆ. **Bonsai Society Of Dallas** ನಮಗೆ ಹತ್ತಿರ ಇರುವ ಸಂಘ. Fort Worth, TX ಹತ್ತಿರ ಇರುವವರಿಗೆ ಅಲ್ಲಿಯೂ ಒಂದು ಸಂಘವಿದೆ.

ನಮ್ಮ ಆಸ್ಟಿನ್ ನಗರದಲ್ಲೂ ಒಂದು Bonsai ಸಂಘವಿದೆ. ಅವರ ಇತ್ತೀಚಿನ ಸುದ್ದಿಪತ್ರದಲ್ಲಿ ನಮ್ಮ ಭಾರತದ ಪ್ರಯತ್ನದ ಬಗ್ಗೆಯೂ ಬರೆದಿದ್ದಾರೆ.
http://www.austinbonsaisociety.com/images/BCI_ambassador_June_12.pdf

ನೀವೆಲ್ಲರೂ ನಮ್ಮ ಈ ಸಂಘಗಳನ್ನ ಸೇರಿ, ಈ ಚಿಕ್ಕಮರಗಳ ಹವ್ಯಾಸ ವನ್ನು ಬೆಳಸಿ ಕನ್ನಡದ ಕಂಪನ್ನು ಹರಡುತ್ತೀರೆಂದು ನಂಬಿದ್ದೇನೆ. ನಿಮಗೆ ಮುಂದೆ ತಿಳಿಯುವುದಕ್ಕೆ ಮತ್ತು ಕಲಿಯುವುದಕ್ಕೆ ನೆರವಾಗಲು ಅಂತರ್ಜಾಲದ ಕೆಲವು ಕೊಂಡಿಗಳನ್ನ (links ) ಕೆಳಗೆ ಕೊಟ್ಟಿದ್ದೇನೆ. ನನ್ನ ಹತ್ತಿರವಿರುವ ಕೆಲವು ಮರಗಳ ಚಿತ್ರಗಳೂ ಇಲ್ಲಿವೆ. ಆದರೆ ನಿಜವಾದ bonsai ಗಳನ್ನ ನೋಡಬೇಕು ಅಂದರೆ ಇಂಟರ್ನೆಟ್ನಲ್ಲಿ ಬಹಳಷ್ಟು ಸಿಗುತ್ತವೆ. ಪ್ರತಿ ವರ್ಷ ನಡೆಯುವ ಮೇಲೆ ಹೇಳಿದ ಪ್ರದರ್ಶನದಲ್ಲೂ ನೋಡಬಹುದು

http://khandbahale.com/englishkannada-q-bonsai.htm

http://www.mangalorean.com/browsearticles.php?arttype=Feature&articleid=1912

http://vriksha.org.in/default.aspx

http://www.bonsaisocietyofdallas.com/



## ಸಮ್ಮರ್ ಸ್ಪೆಷಲ್ ಹಪ್ಪಳ-ಸಂಡಿಗೆ

- ಉಮಾ ಸರ್ವೇಶ್





ಈ ಬೇಸಿಗೆಯ ಬಿಸಿಲಲ್ಲಿ ರುಚಿಕರವಾದ ಕೆಲವು ಸುಲಭವಾಗಿ ಮಾಡುವ ಹಪ್ಪಳ ಸಂಡಿಗೆಗಳು. ಬೇಸಿಗೆಯಲ್ಲಿ ೩ ದಿನ ಕಷ್ಟಪಟ್ಟರೆ ಚಳಿಗಾಲದಲ್ಲಿ ಬೆಚ್ಚಗೆ ಕುಳಿತು ಕರ್‍ರಂಪರ್‍ರಂ ಎಂದು ತಿನ್ನಲು ಕೆಲವು ಹಪ್ಪಳ ಸಂಡಿಗೆ ಸುಲಭವಾಗಿ ಮಾಡುವುದನ್ನು ತಿಳಿಯುವ ಬನ್ನಿ.



### ಅವಲಕ್ಕಿ ಸಂಡಿಗೆ

**ಬೇಕಾಗುವ ಸಾಮಾನು:**

ಅವಲಕ್ಕಿ ಗಟ್ಟಿ ೧/೪ ಕೆ.ಜಿ.
ಸೀಮೆ ಅಕ್ಕಿ ೧೦೦ ಗ್ರಾಮ್
ರುಚಿಗೆ ತಕ್ಕಷ್ಟು ಉಪ್ಪು
ಹಸಿಮೆಣಸಿನಕಾಯಿ ೪-೫
ಇಂಗು
ಬೇಕಾದರೆ ಒಂದು ಈರುಳ್ಳಿ
ಕೊತ್ತಂಬರಿ ಸೊಪ್ಪು

**ಮಾಡುವ ವಿಧಾನ:**

ಸೀಮೆಅಕ್ಕಿಯನ್ನು ರಾತ್ರಿ ತೊಳೆದು ನೀರಲ್ಲಿ ನೆನೆಸಿಡಿ. ಬೆಳಗ್ಗೆ ಅವಲಕ್ಕಿಯನ್ನು ತೊಳೆದು ನೆನೆಸಿಕೊಳ್ಳಿ.ಚೆನ್ನಾಗಿ ನೆಂದ ಮೇಲೆ ಒಂದು ಬೇಸಿನ್‌ಗೆ ಅವಲಕ್ಕಿ,ನೆಂದ ಸೀಮೇಅಕ್ಕಿ ಗಂಜಿ, ಸಣ್ಣಗೆ ಹೆಚ್ಚಿದ ಈರುಳ್ಳಿ, ಹಸಿಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಜೊತೆಗೆ ಇಂಗು, ಉಪ್ಪು ಎಲ್ಲಾ ಹಾಕಿ ಉದುರು ಉದುರಾಗಿ ಚೆನ್ನಾಗಿ ಕಲಸಿ.(ಸೀಮೆ ಅಕ್ಕಿ ನೀರಾಗಿ ಗಂಜಿ ಮಾಡಿ). ಪ್ಲಾಸ್ಟಿಕ್ ಹಾಳೆ ಮೇಲೆ ಸಂಡಿಗೆ ಇಡಿ. ೩ ದಿನ ಚೆನ್ನಾಗಿ ಒಣಗಿದ ಮೇಲೆ ಡಬ್ಬಿಯಲ್ಲಿ ಹಾಕಿ. ಬೇಕಾದಾಗ ಸಂಡಿಗೆ ಕರಿಯಿರಿ. ತಿನ್ನಲು ಬಲು ರುಚಿ. (ಇದೇ ರೀತಿ ಬತ್ತದ ಅರಳಿನಲ್ಲೂ, ಕಡ್ಲೆಪುರಿಯಲ್ಲೂ ಮಾಡಬಹುದು).

### ರವೆ ಹಪ್ಪಳ

**ಬೇಕಾಗುವ ಸಾಮಾನು:**

ರವೆ ೧/೨ ಕೆಜಿ
ರುಚಿಗೆ ತಕ್ಕಷ್ಟು ಉಪ್ಪು
ಹಸಿಮೆಣಸಿನಕಾಯಿ
ಇಂಗು

**ಮಾಡುವ ವಿಧಾನ:**

ಒಲೆ ಮೇಲೆ ನೀರು ಇಟ್ಟು ಚೆನ್ನಾಗಿ ಕುದಿಯುವಾಗ ಇಂಗು,ಉಪ್ಪು, ಖಾರ ಹಾಕಿ ರವೆಯನ್ನು ಹಾಕಿ ಗಂಜಿ ಮಾಡಿ.(ಇಡ್ಲಿ ಹಿಟ್ಟಿನ ಹದ) ಸ್ವಲ್ಪ ಆರಿದ ಮೇಲೆ ಪ್ಲಾಸ್ಟಿಕ್ ಹಾಳೆ ಮೇಲೆ ಸೌಟಿನಿಂದ ಗುಂಡಗೆ ಹಾಕಿ ಚಿಕ್ಕದೋ, ದೊಡ್ಡದೋ ನಿಮ್ಮ ಆಯ್ಕೆ.(ತುಂಬಾ ತೆಳ್ಳಗೆ ಬೇಡ). ೩ ದಿನ ಒಣಗಿದ ಮೇಲೆ ಎಣ್ಣೆಯಲ್ಲಿ ಕರಿಯಿರಿ.

### ಮೈದಾಹಿಟ್ಟಿನ ಹಪ್ಪಳ

**ಬೇಕಾಗುವ ಸಾಮಾನು:**

ಮೈದಾಹಿಟ್ಟು ೧/೨ ಕೆಜಿ
ಉಪ್ಪು
ಇಂಗು

**ಮಾಡುವ ವಿಧಾನ:**

ಮೈದಾಹಿಟ್ಟನ್ನು ಇಡ್ಲಿ ಹಿಟ್ಟಿನ ಹದಕ್ಕೆ ಉಪ್ಪು ನೀರು ಹಾಕಿ ಕಲಸಿ(ಬೇಕಾದರೆ ಅಚ್ಚಖಾರದಪುಡಿ ಅಥವಾ ಹಸಿ ಮೆಣಸಿನಕಾಯಿ ಹಾಕಿ), ಇಡ್ಲಿ ತಟ್ಟೆಯಲ್ಲಿ ಎಣ್ಣೆ ಸವರಿ ತೆಳ್ಳಗೆ ಹರಡಿ ಹಬೆಯಲ್ಲಿ ಬೇಯಿಸಿ.ಬೆಂದ ಮೇಲೆ ಒಂದೊಂದೇ ತೆಗೆದು ಪ್ಲಾಸ್ಟಿಕ್ ಹಾಳೆಯ ಮೇಲೆ ಹಾಕಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ. ಚೆನ್ನಾಗಿ ಒಣಗಿದ ಮೇಲೆ ಡಬ್ಬಕ್ಕೆ ಹಾಕಿ. ಬೇಕಾದಾಗ ಎಣ್ಣೆಯಲ್ಲಿ ಕರಿಯಿರಿ.

### ಸೀಮೆಅಕ್ಕಿ ಮಣಿ ಹಪ್ಪಳ

**ಬೇಕಾಗುವ ಸಾಮಾನು:**

ಸೀಮೆ ಅಕ್ಕಿ ೧/೨ ಕೆಜಿ
ಉಪ್ಪು,
ಇಂಗು

**ಮಾಡುವ ವಿಧಾನ:**

ಸೀಮೆ ಅಕ್ಕಿ ರಾತ್ರಿ ತೊಳೆದು ಸ್ವಲ್ಪ ನೀರು ಹಾಕಿ ನೆನೆಸಿಡಿ.ಬೆಳಿಗ್ಗೆ ಅದನ್ನು ಉಪ್ಪು ಇಂಗು ಹಾಕಿ ಚೆನ್ನಾಗಿ ಕಲಸಿ.ಇಡ್ಲಿ ಪಾತ್ರೆಯಲ್ಲಿ ಸ್ವಲ್ಪ ಎಣ್ಣೆ ಸವರಿ ಸೀಮೆಅಕ್ಕಿಯನ್ನು ತಟ್ಟೆಗೆ ಹಾಕಿ ಚೆನ್ನಾಗಿ ಹರಡಿ.ಒಂದು ಕಾಳಿನ ಮೇಲೆ ಇನ್ನೊಂದು ಕಾಳು ಕೂರಿಸಬೇಡಿ. ಒಂದರ ಪಕ್ಕ ಇನ್ನೊಂದು ಇರುವಂತೆ ಒದ್ದೆ ಕೈಯಲ್ಲಿ ಹರಡಿ, ಹಬೆಯಲ್ಲಿ ಬೇಯಿಸಿ.ಬೆಂದ ಮೇಲೆ ಕಾಳು ಬೆಂದು ಬಿಲ್ಲೆ ಬರುತ್ತದೆ. ಅದನ್ನು ಬಿಸಿಲಲ್ಲಿ ಪ್ಲಾಸ್ಟಿಕ್ ಮೇಲೆ ಹಾಕಿ ಚೆನ್ನಾಗಿ ಒಣಗಿಸಿ. ಚೆನ್ನಾಗಿ ಒಣಗಿದ ಮೇಲೆ ಎಣ್ಣೆಯಲ್ಲಿ ಹಾಕಿ ಕರಿಯಿರಿ.ಇದು ಮಣಿ ಮಣಿಯಾಗಿ ನೋಡಲು ಚೆನ್ನ.

Liberty is the breath of life to nations. ~George Bernard Shaw

## ಸೀಮೆಅಕ್ಕಿ ಗಂಜಿ ಹಪ್ಪಳ

**ಬೇಕಾಗುವ ಸಾಮಾನು:**

ಸೀಮೆಅಕ್ಕಿ ೧/೨ ಕೆಜಿ

ಉಪ್ಪು,

ಕಾರ,

ಇಂಗು

**ಮಾಡುವ ವಿಧಾನ:**

ಸೀಮೆ ಅಕ್ಕಿಯನ್ನು ಕುದಿಯುವ ನೀರಿಗೆ ಹಾಕಿ.ಚೆನ್ನಾಗಿ ಬೇಯಿಸಿ ಗಂಜಿ ಹದಕ್ಕೆ ಮಾಡಿಕೊಂಡು ಪ್ಲಾಸ್ಟಿಕ್ ಹಾಳೆ ಮೇಲೆ ಚಮಚದಿಂದ ಹಾಕಿ(ತುಂಬಾ ತೆಳ್ಳಗೆ ಬೇಡ, ಒಣಗಿದ ಮೇಲೆ ಪುಡಿಪುಡಿ ಆಗುತ್ತೆ.) ಚೆನ್ನಾಗಿ ಒಣಗಿಸಿ. ಬೇಕಾದಾಗ ಕಾದ ಎಣ್ಣೆಯಲ್ಲಿ ಕರಿಯಿರಿ, ಸವಿಯಿರಿ.

## ಅವಲಕ್ಕಿ ಚಕ್ಕುಲಿ

**ಬೇಕಾಗುವ ಸಾಮಾನು:**

ತೆಳು ಅವಲಕ್ಕಿ ೧/೨ ಕೆಜಿ

ಉಪ್ಪು,

ಇಂಗು,

ಖಾರ(ಬೇಕಾದರೆ) ರುಚಿಗೆ

**ಮಾಡುವ ವಿಧಾನ:**

ತೆಳು ಅವಲಕ್ಕಿಗೆ ಸ್ವಲ್ಪ ನೀರು ಚಿಮುಕಿಸಿ, ಉಪ್ಪು,ಇಂಗು ಹಾಕಿ ಚೆನ್ನಾಗಿ ಗಟ್ಟಿಯಾಗಿ ಕಲಸಿ ಚೆನ್ನಾಗಿ ಮಿಕ್ಸ್ ಮಾಡಿ. ಚಕ್ಕುಲಿ ಒರಳಿಗೆ ಚಕ್ಕುಲಿ ಬಿಲ್ಲೆ ಹಾಕಿ ಹಿಟ್ಟು ಹಾಕಿ ಪ್ಲಾಸ್ಟಿಕ್ ಹಾಳೆ ಮೇಲೆ ಉದ್ದಕ್ಕೆ ಒತ್ತಿ ಚೆನ್ನಾಗಿ ಬಿಸಿಲಲ್ಲಿ ಒಣಗಿಸಿ.ಒಣಗಿದ ಚಕ್ಕುಲಿಯನ್ನು ಬೇಕಾದಾಗ ಕಾದ ಎಣ್ಣೆಯಲ್ಲಿ ಕರಿದು ತಿನ್ನಬಹುದು.


## ಕಸದಿಂದ ರಸ

ಈಗ ಕಲ್ಲಂಗಡಿ ಹಣ್ಣಿನ ಕಾಲ. ಹಣ್ಣು ತಂದು ಕೆಂಪನೆ ಭಾಗ ತಿಂದು ಸಿಪ್ಪೆ ಎಸೆಯುತ್ತೀವಿ ಅಲ್ಲವಾ? ಇನ್ನು ಮೇಲೆ ಹಾಗೆ ಮಾಡಬೇಡಿ. ಕೆಂಪು ಹಣ್ಣಿನ ಕೆಳಗೆ ಹಸಿರು ಸಿಪ್ಪೆಯ ಮೇಲೆ ಬಿಳಿ ಭಾಗವನ್ನು ಕತ್ತರಿಸಿ ತೆಗೆದುಕೊಳ್ಳಿ. ಈ ಕಲ್ಲಂಗಡಿ ಬಿಳೀಭಾಗದಿಂದ ಹಲ್ವ ಮಾಡಿ ಕೊಡಿ.

ಬಿಳಿ ಭಾಗವನ್ನು ತುರಿದುಕೊಳ್ಳಿ. ಅಷ್ಟೆ ಪ್ರಮಾಣ ಸಕ್ಕರೆ ಸೇರಿಸಿ(ಸಿಹಿ ಕಡಿಮೆ ಬಳಸುವವರು ಆರ ರುಚಿಗೆ ಸ್ವಲ್ಪ ಕಡಿಮೆ ಹಾಕಿ). ಒಲೆ ಮೇಲಿಟ್ಟು ಬಾಣಲೆಗೆ ಹಾಕಿ ಸ್ವಲ್ಪ ಹಾಲಿನ ಕೆನೆ, ಸ್ವಲ್ಪ ತುಪ್ಪ ಹಾಕಿ ಚೆನ್ನಾಗಿ ಕೈಯಾಡಿಸಿ. ಬಾಣಲೆಯಿಂದ ಬಿಡುವಾಗ ಒಲೆ ಆರಿಸಿ ಗೋಡಂಬಿ, ದ್ರಾಕ್ಷಿ ತುಪ್ಪದಲ್ಲಿ ಹುರಿದು ಹಾಕಿ ಏಲಕ್ಕಿ ಪುಡಿ ಹಾಕಿ ಸವಿಯಿರಿ. ತುಂಬಾ ರುಚಿಯಾಗಿರುತ್ತದೆ.ಯಾವುದರ ಹಲ್ವಾ ಎಂದು ಕೇಳಿದರೆ ಯಾರೂ ಹೇಳಲಾರರು.

## ಕೆಲವು ಉಪಯುಕ್ತ ಸಲಹೆಗಳು

- ಗಾಯತ್ರಿ ಸುಬ್ಬಕೃಷ್ಣ




* ಪೂರಿ ಹಿಟ್ಟು ಕಲಸುವಾಗ ಹಿಟ್ಟಿನ ಜೊತೆ ಸ್ವಲ್ಪ ಕಡಲೆ ಹಿಟ್ಟು ಬೆರೆಸಿಕೊಂಡರೆ ರುಚಿಯಾಗಿರುತ್ತದೆ ಮತ್ತು ಚೆನ್ನಾಗಿ ಉಬ್ಬುತ್ತದೆ.
* ತಲೆ ನೋವು ಶುರುವಾದಾಗ ಸ್ವಲ್ಪ ಮೊಸರನ್ನು ಸೇವಿಸಿದರೆ ತಕ್ಷಣ ಶಮನವಾಗುತ್ತದೆ.
* ಈರುಳ್ಳಿ ಹೆಚ್ಚುವಾಗ ಪಕ್ಕದಲ್ಲಿ ನೀರಿನ ಪಾತ್ರೆ ಇಟ್ಟುಕೊಂಡರೆ ಕಣ್ಣಿನಲ್ಲಿ ನೀರು ಬರುವ ಸಾಧ್ಯತೆ ಕಡಿಮೆ.
* ಮೈಕ್ರೊವೇವಿನಲ್ಲಿ ಮಸಾಲೆ ವಾಸನೆ ತಡೆಯಲು ಒಂದು ಕಪ್ ಸಾದ ನೀರು ಇಟ್ಟು ಒಂದು ನಿಮಿಷ ಆನ್ ಮಾಡಿ/ಕಾಯಿಸಿ ಅದರಲ್ಲೆ ಸ್ವಲ್ಪ ಹೊತ್ತು ಬಿಟ್ಟರೆ ವಾಸನೆ ಇರುವುದಿಲ್ಲ.
* ಹಸಿರು ಮೆಣಸಿನಕಾಯಿ ಹೆಚ್ಚಿದ ತಕ್ಷಣ ಮೊಸರಿನಲ್ಲಿ ಕೈ ತೊಳೆದುಕೊಂಡರೆ ಕೈಗಳು ಉರಿಯುವುದಿಲ್ಲ.
* ಸಾರು ಅಥವ ಸಾಂಬಾರಿನಲ್ಲಿ ಉಪ್ಪು ಜಾಸ್ತಿಯಾದರೆ ಅದಕ್ಕೆ ಬೆಂದ ಆಲೂಗೆಡ್ಡೆಯನ್ನು ಸಿಪ್ಪೆ ತೆಗೆದು ಹಾಕಿ ಕುದಿಸಿದರೆ ಉಪ್ಪು ಕಡಿಮೆಯಾಗುತ್ತದೆ.
* ಬೆಳ್ಳಿಯ ದೇವರ ವಿಗ್ರಹಗಳನ್ನು ಸಕ್ಕರೆ ಅಥವಾ ಅಡಿಗೆ ಸೋಡಾದಲ್ಲಿ ತೊಳೆದರೆ ಹೊಳೆಯುತ್ತದೆ.
* ಕರ್ಪೂರದ ಡಬ್ಬಿಗೆ ಕರಿ ಮೆಣಸು ಕಾಳುಗಳನ್ನು ಹಾಕಿದರೆ ಬೇಗ ಕರಗುವುದಿಲ್ಲ.
* ಹಸಿರು ಮೆಣಸಿನಕಾಯಿ ತೊಟ್ಟುಗಳನ್ನು ತೆಗೆದು ಡಬ್ಬಿಯಲ್ಲಿ ಮುಚ್ಚಿಟ್ಟರೆ ಬಹಳ ದಿನ ಹಸಿರಾಗಿಯೇ ಉಳಿಯುತ್ತದೆ.
* ಅಡಿಗೆ ಮಾಡುವಾಗ ಕುಕ್ಕರ್, ಬಾಂಡ್ಲೆ, ತವೆಯ ಬಿಸಿ ತಾಕಿದರೆ ತಕ್ಷಣ ಅಡಿಗೆ ಸೋಡಾ ಮತ್ತು ಎಣ್ಣೆ ಬೆರಸಿ ಹಚ್ಚಿದರೆ ಗಾಯ ಕಪ್ಪಾಗುವುದಿಲ್ಲ ಮತ್ತು ಬೊಬ್ಬೆ ಬರುವುದಿಲ್ಲ.

**Inquilab Jindabad -Bhaghat Singh**

## ಅಪ್ಪೆ ಪಾಯಸ

- ಆನಂದಲಕ್ಷ್ಮಿ



ಇನ್ನೇನು ಶ್ರಾವಣ ಮಾಸ ಆರಂಭ. ಹಬ್ಬಗಳ ಸಾಲು ಸಾಲು. ಹಬ್ಬಕ್ಕೆ ಏನು ಸಿಹಿ ಎಂದು ತಲೆ ಕೆಡಿಸ್ಕೋಬೇಡಿ. ರುಚಿ ರುಚಿ ಅಪ್ಪೆ ಪಾಯಸದ ಪರಿಮಳ ನಿಮ್ಮ ಪಾಕಶಾಲೆಯಲ್ಲೂ ಪಸರಿಸಲಿ!



### ಬೇಕಾಗುವ ಸಾಮಾನು:

ಮೈದಾ ಹಿಟ್ಟು - ೩/೪ ಕಪ್
ಚಿರೋಟಿ ರವೆ - ೧/೪ ಕಪ್
ಅಡುಗೆ ಸೋಡ - ೧ ಚಿಟಿಕೆ
ಹಾಲು - ೩ ಕಪ್
ಸಕ್ಕರೆ - ೨ ಕಪ್
ಏಲಕ್ಕಿ - ೫,೬
ಕೇಸರಿ - ೧ ಚಿಟಿಕೆ
ದ್ರಾಕ್ಷಿ - ೧/೨ ಕಪ್
ಗೋಡಂಬಿ - ೧/೨ ಕಪ್
ತುಪ್ಪ - ಅಗತ್ಯವಾದಷ್ಟು

### ಮಾಡುವ ವಿಧಾನ:

ಮೈದಾಹಿಟ್ಟು ಮತ್ತು ಚಿರೋಟಿ ರವೆ ಸೇರಿಸಿ ಅದಕ್ಕೆ ಒಂದು ಚಿಟಿಕೆ ಅಡುಗೆ ಸೋಡ ಸೇರಿಸಿ. ಪೂರಿ ಹಿಟ್ಟಿನ ಹದಕ್ಕೆ ನೀರು ಹಾಕಿ ಕಲಸಿ. ನಂತರ ತೆಳ್ಳಗೆ ಒತ್ತಿ ಕಾದ ತುಪ್ಪದಲ್ಲಿ ಗರಿಗರಿಯಾಗಿರುವಂತೆ ಪೂರಿಗಳನ್ನು ಕರಿಯಿರಿ. ಈ ಪೂರಿಗಳನ್ನು ಕೈಯಿಂಡ ಪುಡಿ ಪುಡಿ ಮಾಡಿ. ಈ ಪುಡಿಯನ್ನು ಕುದಿಯುವ ನೀರಿಗೆ ಹಾಕಿ ಚೆನ್ನಾಘಿ ಕಲಸಿ, ಹಿಂಡಿ ತೆಗೆಯಿರಿ. ಅಗತ್ಯವೆನಿಸಿದಲ್ಲಿ ಶೋಧಿಸಿ ನೀರು ಹೊರ ಚೆಲ್ಲಿ.
ಹಾಲು ಒಲೆಯ ಮೇಲಿಟ್ಟು ಕಾಯಿಸಿ. ಕುದಿ ಬಂದಾಗ ಹಿಂಡಿ ತೆಗೆದ ಪದಾರ್ಥವನ್ನು ಹಾಲಿಗೆ ಹಾಕಿ ಸಕ್ಕರೆ ಬೆರೆಸಿ, ಚೆನಾಗಿ ಬೇಯಿಸಿ. ಪಾಯಸದ ಹದ ಉಂಟಾದಾಗ ಏಲಕ್ಕಿ ಪುಡಿ ಹಾಕಿ. ಕೇಸರಿಯನ್ನು ಸ್ವಲ್ಪ ಹಾಲಿನಲ್ಲಿ ರಂಗಳಿಸಿ ಪಾಯಸಕ್ಕೆ ಹಾಕಿ. ಕುದಿ ಬಂದ ಮೇಲೆ ಒಲೆಯಿಂದ ಕೆಳಕ್ಕಿಳಿಸಿ. ಆ ನಂತರ ತುಪ್ಪದಲ್ಲಿ ಹುರಿದ ಗೋದಂಬಿ ಮತ್ತು ದ್ರಾಕ್ಷಿ ಹಾಕಿದರೆ ರುಚಿ ರುಚಿ ಅಪ್ಪೆ ಪಾಯಸ ಸಿದ್ಧ.

ಮುಂದಿನ ಸಂಚಿಕೆಯನ್ನು ದೀಪಾವಳಿ-2012ರ ವೇಳೆಗೆ ಸಿದ್ಧಪಡಿಸಲಾಗುವುದು.ನಿಮ್ಮ ಸಲಹೆ, ಸೂಚನೆ, ವಿಮರ್ಶೆಗಳಿಗೆ ಸದಾ ಸ್ವಾಗತ. ನಿಮ್ಮ ಆಸಕ್ತಿಯ ವಿಷಯ, ವರದಿ, ಪ್ರವಾಸ ಕಥನ, ಅನುಭವ, ಅಭಿಪ್ರಾಯ, ಚಿತ್ರಕಲೆ, ವ್ಯಂಗ್ಯಚಿತ್ರ, ಹೊಸರುಚಿ, ಹಾಡು-ಹಸೆ, ಪತ್ರ, ಪದಬಂಧ, ರಸಪ್ರಶ್ನೆ, ಪ್ರಕಟಣೆ, ವಿಜ್ಞಾನ, ವೈದ್ಯಕೀಯ, ಸಾಮಾಜಿಕ, ರಾಜಕೀಯ, ಪ್ರಚಲಿತ, ಸಾಹಿತ್ಯ, ಸಂಗೀತ, ಚಲನಚಿತ್ರ, ಹಾಸ್ಯ, ವಿಮರ್ಶೆ, ಆರೋಗ್ಯ, ಪುಸ್ತಕ ಪರಿಚಯ, ವಾಣಿಜ್ಯ, ವ್ಯವಹಾರ ಮುಂತಾದ ಯಾವುದೇ ವಿಭಾಗಕ್ಕೆ ಕೊಡುಗೆಗಳನ್ನು mkantcommittee@gmail.com ವಿಳಾಸಕ್ಕೆ ಕಳುಹಿಸಿ.

**Without freedom, no one really has a name. ~Milton Acorda**

# ಹಾಲುಂಡ ತವರು



-ಭಾವ ರೂಪ: ವರ್ಷ ಕುಲಕರ್ಣಿ
- ಬರಹ ರೂಪ: ವಿಜಯಾ ವಸಂತ ಮನೋಳಿ

ಹಾಲುಂಡ ತವರ ನೆನೆಯುವ ಪ್ರತಿ ಹೆಣ್ಣುಮಕ್ಕಳ
ಮನೋಗಾಥೆಯ ಅರ್ಪಣೆ:
ಪೂಜ್ಯ ತಂದೆ-ತಾಯಿಗಳಿಗೆ
ಶ್ರೀ ವಸಂತ ಮನೋಳಿ ಹಾಗೂ ವಿಜಯಾ ವಸಂತ ಮನೋಳಿ
೪೦ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳೊಂದಿಗೆ
- ವರ್ಷ,ಸಂಜಯ್,ಸಾಕ್ಷಿ, ಶ್ರೇಯ ಕುಲಕರ್ಣಿ



**ಮ**ರೆತೇನೆ ನಾನು ಹಾಲುಂಡ ತವರು
ದೇವರಿಗೆ ಸಮನಾಗಿಹರು ತಾಯಿ-ತಂದೆಗಳಿವರು
ಅಂದು ತೂಗಿತ್ತು ಬಂಗಾರದ ತೊಟ್ಟಿಲು
ಇಂದು ತುಳಿದಿರುವೆ ೬೪ರ ಮೆಟ್ಟಿಲು
ಕಷ್ಟ-ಕಾರ್ಪಣ್ಯಗಳನರಿತ ಮಾನವತೆ
ಸದಾ ಅವರಲ್ಲಿರುತಿರೆ ಅನವರತ.

ಒಂಬತ್ತು ತಿಂಗಳು ಹೊತ್ತು-ಹೆತ್ತ ತಾಯಿ
ಜನ್ಮ ನೀಡಿದಳು ಎನಗಂದು
ಅಪ್ಪನಿಗೆ ತಕ್ಕ ಸತಿಯಾಗಿ
ಹೆಜ್ಜೆಗಳಲಿ ಹೆಜ್ಜೆಯಿಟ್ಟು ಸಾಗಿಹಳು ಅವರಂತೆ
ಏನು ಕೊಟ್ಟರು ಕೊನೆಯಿಲ್ಲ ಅವರಿಗೆ!

ನನ್ನನ್ನು ಬೆಳೆಸಿ, ಎಲ್ಲವನು ಕಲಿಸಿ
ಧಾರೆಯೆರೆದು ಕೊಟ್ಟಿಹರು
ಚೆನ್ನದಂಥ ನನ್ನ ಪತಿ ಸಂಜಯರಿಗೆ
ಮುಕ್ಕೋಟಿ ದೇವತೆಗಳ ಕೃಪೆಯಿರಲಿ ಅವರಿಗೆ
ನಲವತ್ತು ವರುಷಗಳ ದಾಂಪತ್ಯ ಜೀವನದ ವೈಭವದಿ
ಜನ್ಮಕೊಟ್ಟ ತಾಯಿ ತಂದೆಗಳೇ ಇಂದು ನಿಮ್ಮ
ಮದುವೆ ಹಬ್ಬದ ದಿನ ಏನು ಕೊಡಲಿ? ಏನು ಬಿಡಲಿ?
ವಾತ್ಸಲ್ಯಮಯ ಅಪ್ಪುಗೆ, ಮಮತೆಯ ಮಾತುಗಳು
ಏನು ಕೊಟ್ಟರೂ ಋಣವ ತೀರಿಸಲಾರೆ.

ಹೆತ್ತಮ್ಮ ಹೆತ್ತಪ್ಪ ನೀವು
ಸಾವಿರಾರು ವರುಷ ಬದುಕಿ ಬಾಳಿ,
ನಮಗೆಲ್ಲ ಮಾರ್ಗದರ್ಶಿಗಳಾಗಿ.
ನೀಡುತಿಹೆ ಈ ಬಾಲೆ
ಸಹಸ್ರ ನಮಸ್ಕಾರಗಳನು, ಸ್ವೀಕರಿಸಿ,
ಸಂಜಯ, ಸಾಕ್ಷಿ, ಶ್ರೇಯಾಭಿವೃದ್ಧಿಗೆ.

ಎಷ್ಟು ಜನ್ಮವೆತ್ತಿದರು ಸಿಗದು
ನಿಮ್ಮಂಥ ತಾಯಿ ತಂದೆಗಳು.
ಸದಾ ಪ್ರಾರ್ಥಿಸುವೆ ಭಗವಂತನಲ್ಲಿ
ನಿಮಗೆಲ್ಲ ಒಳ್ಳೆಯದಾಗಲೆಂದು.
ಹುಟ್ಟಿದರೆ ಪುನಃ ಪುನಃ ನಿಮ್ಮಲ್ಲಿ ಹುಟ್ಟಬೇಕು,
ಇದುವೇ ನಾನು ಬೇಡುವೆ ದೇವರಲಿ.
ಕೊನೆವರೆಗೂ "ನಂದಾದೀಪ"
ಇದುವೆ ಕೊಡುವೆ ಕಾಣಿಕೆ
ಮುಗಿಸಲೇ ಈ ಒಕ್ಕಣಿಕೆ.

## ಕನ್ನಡೇತರ ಕನ್ನಡಿಗರು

- ಸುಧಾ ಶ್ರೀನಾಥ್

**ನ**ನಗೆ ಅನುಲ್ ಆಪ್ತೆರವರ ಪರಿಚಯವಾಗಿದ್ದು ೧೯೯೯ರಲ್ಲಿ DFW Hindu Temple ನ Sunday Schoolಗೆಂದು ಹೋದಾಗ. ಅವರಾಗಲೇ ಅಲ್ಲಿ ಶ್ರದ್ಧಾವಂತ ಸ್ವಯಂಸೇವಕರಲ್ಲಿ ಒಬ್ಬರಾಗಿ ಗುರುತಿಸಿಕೊಂಡಿದ್ದರು. ನಮ್ಮಲ್ಲಿ ಕೆಲವರು ಕನ್ನಡಿಗರು ಒಟ್ಟುಗೂಡಿ DFW Hindu Temple ನಲ್ಲಿ ಅರಳು ಮಲ್ಲಿಗೆ ಶಾಲೆ ಶುರುಮಾಡುವ ಉತ್ಸುಕತೆ ತೋರಿಸಿದಾಗ ಕಾಯಾ ವಾಚಾ ಮನಸಾ ಸಹಾಯ ಮಾಡಿದವರಲ್ಲಿ ಅನುಲ್ ಆಪ್ತೆ ಒಬ್ಬರು. ಯಾವುದೇ ಒಂದು ಕಾರ್ಯದಲ್ಲಿ it's the teamwork that keeps it going. Count me in whenever  you need ಯೆಂದು ಹೇಳಿದ್ದಷ್ಟೇ ಅಲ್ಲ ಅದನ್ನು ಅಕ್ಷರಶಃ ಪಾಲಿಸಿದರು ಕೂಡ.



ಆ ವರ್ಷವೇ ನಾನು ಮತ್ತು ಡಾ. ಶ್ರೀನಾಥ್ ರವರು ವಿದ್ಯಾವಿಕಾಸ್ ಶಾಲೆಯನ್ನು  expand  ಮಾಡಿ ಅದಕ್ಕೊಂದು age-appropriate  structural format  ಕೊಡುವುದಕ್ಕೆ ಪ್ರೇರೇಪಿಸಿದವರಲ್ಲಿ ಅನುಲ್ ಆಪ್ತೆ ಅವರೂ ಇದ್ದರು. ಅಷ್ಟೇ ಅಲ್ಲ, ಪ್ರತಿ ತಿಂಗಳು ಮೊದಲನೆಯ ಭಾನುವಾರ ವಿದ್ಯಾವಿಕಾಸ್ ಶಾಲೆಯ assembly conduct  ಮಾಡಲು ಅನುಲ್ ಆಪ್ತೆ ಅವರ ಸಹಾಯವಿಲ್ಲದಿದ್ದರೆ ನನಗೆ ಸಾಧ್ಯವೇ ಆಗುತ್ತಿರಲಿಲ್ಲವೆಂದು ಹೇಳಿದರೇ ಅತಿಶಯೋಕ್ತಿಯಾಗಲಾರದು. ನಾನು DFW ಕನ್ನಡಿಗರ ಪ್ರತಿನಿಧಿಯಾಗಿ ದೇವಸ್ಥಾನದ  Executive Committee  ನಲ್ಲಿದ್ದಾಗ ಕನ್ನಡಿಗರ ಒತ್ತಾಸೆಯನ್ನು ಪೂರೈಸಲು ಸಂಗೀತ ಪಿತಾಮಹ ಪುರಂದರದಾಸರ ಕೀರ್ತನೆಗಳನ್ನು ನಮ್ಮ ಜೊತೆ ನಮ್ಮ ಮಕ್ಕಳೂ ಆಸ್ವಾದಿಸಬೇಕೆಂಬ ನಿಟ್ಟಿನಲ್ಲಿ DFW Youth Center ನಲ್ಲಿ  Purandara Day  ಸಂಭ್ರಮದಿಂದ ಆಚರಿಸಲು ಶುಭಾರಂಭವಾಗಿದ್ದು ನಿಮಗೆಲ್ಲಾ ನೆನಪಿರಬಹುದು.

ಅಂದಿನ ದಿನದ ಊಟದ ವ್ಯವಸ್ಥೆಗೆ ಕನ್ನಡಿಗರ ಪರವಾಗಿ ಶ್ರೀಮತಿ ಮೀನಾ ಭಾರದ್ವಾಜ್  ಅವರು ಮುಂದೆ ಬಂದರೆ, ಕನ್ನಡೇತರರ ಪರವಾಗಿ ಸಹಾಯಕ್ಕೆ ಬಂದವರು ಅನುಲ್ ಆಪ್ತೆರವರು. ಅಲ್ಲಿ ಸೇರಿದ ಕನ್ನಡಿಗರೆಲ್ಲರೂ  ಅಂದು ಸವಿದಿದ್ದು ಪುರಂದರಾಮೃತವನ್ನಷ್ಟೇ ಅಲ್ಲ, ಇವರಿಬ್ಬರ ಸಹಕಾರ ಮತ್ತು ಸಂಘಟನೆಗಳಿಂದ ತಯಾರಾದ ಮೃಷ್ಟಾನ್ನ ಭೋಜನವನ್ನು ಕೂಡಾ.

ದೇವಸ್ಥಾನದಲ್ಲಿ ಪ್ರತಿವರ್ಷ ನಡೆಯುವ ಸ್ವರ್ಣಗೌರೀ ಹಬ್ಬದ ದಿನ ಮೊಟ್ಟಮೊದಲಬಾರಿಗೆ ಕನ್ನಡಿಗರ ಹೆಮ್ಮೆಯ ಬಿಸಿಬೇಳೆ ಭಾತನ್ನೂ  ಒಳಗೊಂಡ ಊಟದ ವ್ಯವಸ್ಥೆ ಮಾಡಿದಾಗಲೂ ನಮ್ಮವರಿಗೆ ಸಹಾಯಕ್ಕೆಂದು ಬಂದವರು ಅನುಲ್ ಆಪ್ತೆ. ಎಣಿಸುತ್ತಾ ಹೋದರೆ ಒಂದೇ, ಎರಡೇ? ನಾವು ದೇವಸ್ಥಾನಕ್ಕೆ ಹೋಗಿ ಬರುತ್ತಿದ್ದ ಆರೇಳು ವರ್ಷಗಳಲ್ಲಿ ಪ್ರತಿ ಭಾನುವಾರವೂ rain or shine  ಅನುಲ್ ಆಪ್ತೆರವರು ಅಲ್ಲಿಯ ಮಹಾ ಪ್ರಸಾದದ ಕಾರ್ಯದಲ್ಲಿ ಹಾಜರ್. ಮಕ್ಕಳ ಕಾರ್ಯಕ್ರಮಗಳಿಗೆ ಕೇಳಿದಾಗ ಮತ್ತು ಕೇಳದೇ ಇದ್ದಾಗ ತಾವೇ ಕೇಳಿ ಅವರೇ ಸಹಾಯ ಮಾಡಿದ ಸಂದರ್ಭಗಳು ಅಸಂಖ್ಯಾತ.

ಅವರು ಇಷ್ಟು ಬೇಗ ದೇಹದಿಂದ ಇಲ್ಲವಾದರೆಂದರೆ ನಂಬಲಸಾಧ್ಯ. ಅವರ ಸಹಾಯವನ್ನು ಗೌರವಾಭಿವಂದನೆಗಳೊಂದಿಗೆ ಸ್ಮರಿಸುತ್ತಾ ಸಮಸ್ತ DFW  ಕನ್ನಡಿಗರ ಪರವಾಗಿ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥನೆ.

From every mountain side, Let Freedom ring. ~Samuel F. Smith